



E-Bengaluru Beragu
MAG (2) PRB/CR/36/24-25
T/KN2024/2076

# ಈ-ಬೆಂಗಳೂರು ಬೆರಗು

ಸಂಪುಟ: 3 Vol: 3 ಸಂಚಿಕೆ: 05 Issue: 05 ಸೆಪ್ಟೆಂಬರ್ 15 - 31 ಪುಟಗಳು: 14 Pages: 14 ಬೆಲೆ: 15.00 ರೂ.



## ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ಗೌರಿ-ಗಣೇಶ ಹಬ್ಬಕ್ಕೆ ಅತ್ಯಂತ ವಿಶೇಷವಾದ ಸ್ಥಾನವಿದೆ

## ಹಿರಿಯ ನಟ ಅನಂತ್‌ನಾಗ್‌ಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ






## ಶತಕದ ಪಥ ಪ್ರಗತಿಯ ರಥ

## ಚುನಾವಣೆ ಆಯೋಗದ ಕರ್ತವ್ಯಗಳ ಮತ್ತು ಪಾರದರ್ಶಕತೆ



ನೇರ, ನಿರ್ಭೀತಿ, ನಿಷ್ಪಕ್ಷಪಾತ ಮತ್ತು ನಿಮ್ಮ ಆಯ್ಕೆಯ ಸುದ್ದಿಗಳಿಗಾಗಿ....



ಈ-ಬೆಂಗಳೂರು ಬೆರಗು
E-Bengaluru Beragu



ಸಂಪಾದಕರ ಪುಟ

# ಶತಕದ ಪಥ – ಪ್ರಗತಿಯ ರಥ

## ‘ದೃಢ ಕರ್ನಾಟಕದ ಸಂಕಲ್ಪ’ – 100 ದಿನಗಳಲ್ಲಿ ಸರ್ಕಾರದ ಹೆಜ್ಜೆ ಗುರುತು



ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತಕ್ಕೆ ದಿನಾಂಕ: ಸೆಪ್ಟೆಂಬರ್ 10 ರಂದು 100 ದಿನಗಳು ಪೂರೈಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಜನತೆಗೆ ನೀಡಿರುವ ಸಂದೇಶದಲ್ಲಿ ಸರ್ಕಾರದ ಮುಂದಿನ ಆದ್ಯತೆಗಳು ಹಾಗೂ ಮೊದಲ 100 ದಿನಗಳಲ್ಲಿ ಕೈಗೊಂಡಿರುವ ಪ್ರಮುಖ ಕ್ರಮಗಳನ್ನು ವಿವರಿಸಿದ್ದಾರೆ. “100 ದಿನ–100 ಮಾರ್ಗ–ಒಂದು ದೃಷ್ಟಿ” ಎಂಬ ಆಶಯದೊಂದಿಗೆ ‘ದೃಢ ಕರ್ನಾಟಕದ ಸಂಕಲ್ಪ’*ವನ್ನು ಮುಂದಿಟ್ಟಿರುವ ಅವರು, ಆರ್ಥಿಕವಾಗಿ ಬಲಿಷ್ಠ, ಸಾಮಾಜಿಕವಾಗಿ ಸಬಲೀಕೃತ ಹಾಗೂ ತಂತ್ರಜ್ಞಾನದಲ್ಲಿ ಮುಂಚೂಣಿಯ ಕರ್ನಾಟಕ ನಿರ್ಮಾಣದ ಗುರಿಯನ್ನು ಪ್ರಕಟಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕಕ್ಕೆ ಸಾಮಾಜಿಕ ನ್ಯಾಯದ ಬಲವಾದ ಅಡಿಪಾಯ ಹಾಕಿದ್ದಾರೆ ಎಂದು ಶಿವಕುಮಾರ್ ತಮ್ಮ ಸಂದೇಶದಲ್ಲಿ ಉಲ್ಲೇಖಿಸಿದ್ದಾರೆ. ಆಡಳಿತವು ಹೆಚ್ಚು ಅಗತ್ಯವಿರುವವರ ಪರ ನಿಲ್ಲಬೇಕು ಎಂಬ ತತ್ವದೊಂದಿಗೆ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಇದೇ ಸಂದರ್ಭದಲ್ಲಿ ಸರ್ಕಾರದ ಪ್ರಮುಖ ಯೋಜನೆಗಳಾದ ಐದು ಗ್ಯಾರಂಟಿಗಳು ರಾಜ್ಯದ ಕುಟುಂಬಗಳಿಗೆ ನೆರವು ಮತ್ತು ಭದ್ರತೆ ಒದಗಿಸಿವೆ ಎಂದು ಅವರು ಹೇಳಿದ್ದಾರೆ.

ಮೊದಲ 100 ದಿನಗಳಲ್ಲಿ ಸರ್ಕಾರ ಕೈಗೊಂಡಿರುವ ಪ್ರಮುಖ ಕ್ರಮಗಳಲ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳ ಪ್ರವೇಶದಲ್ಲಿ 7.5 ಪ್ರತಿಶತ ಮೀಸಲಾತಿ ಪ್ರಮುಖವಾಗಿದೆ ಎಂದು ಪತ್ರದಲ್ಲಿ ಹೇಳಲಾಗಿದೆ. ಇದರ ಜೊತೆಗೆ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವ ಕ್ರಮವೂ ಶಿಕ್ಷಣದ ಅವಕಾಶಗಳನ್ನು ಮತ್ತಷ್ಟು ಸುಲಭಗೊಳಿಸುವ ಉದ್ದೇಶ ಹೊಂದಿದೆ.

ರಾಜ್ಯದ ಯುವಜನರ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು 10,000 ಭಾರತ್ ಜೋಡೋ ಯುವ ಸಂಘಗಳ ಸ್ಥಾಪನೆಗೆ ಒತ್ತು ನೀಡಲಾಗಿದೆ. ಕ್ರೀಡೆ, ಸಂಸ್ಕೃತಿ ಮತ್ತು ರಾಷ್ಟ್ರ ನಿರ್ಮಾಣದ ಚಟುವಟಿಕೆಗಳಲ್ಲಿ ಯುವಕರನ್ನು ತೊಡಗಿಸುವುದು ಇದರ ಉದ್ದೇಶವಾಗಿದೆ.

ಕರ್ನಾಟಕದಲ್ಲಿ ಹೂಡಿಕೆಯನ್ನು ಆಕರ್ಷಿಸುವ ಮೂಲಕ ಉದ್ಯೋಗ ಸೃಷ್ಟಿಗೆ ಸರ್ಕಾರ ಆದ್ಯತೆ ನೀಡಿದೆ. ಸುಮಾರು ರೂ. 29,679 ಕೋಟಿ ಮೊತ್ತದ ಹೂಡಿಕೆ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇದರಿಂದ ಸುಮಾರು 66,000 ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆ ಇದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ರಾಜ್ಯದ ಹಿಂದುಳಿದ ಜಿಲ್ಲೆಗಳತ್ತ ವಿಶೇಷ ಗಮನ ಹರಿಸುವ ಉದ್ದೇಶದಿಂದ ‘ಉದ್ಯೋಗ ನಿಧಿ’ ಮೂಲಕ 10 ಜಿಲ್ಲೆಗಳಲ್ಲಿ ಒಂದು ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯನ್ನೂ ಸರ್ಕಾರ ಹೊಂದಿದೆ ಎಂದು, ಇದರ ಜೊತೆಗೆ ಸರ್ಕಾರಿ ಇಲಾಖೆಗಳಲ್ಲಿನ 72,000 ಹುದ್ದೆಗಳ ಭರ್ತಿ ಪ್ರಕ್ರಿಯೆ ಆರಂಭಿಸಿರುವುದನ್ನು ಕರ್ನಾಟಕದ ಯುವಜನಾಂಗ ಮತ್ತು ಉದ್ಯೋಗಾಕಾಂಕ್ಷಿಗಳಿಗೆ ಇದು ಮಹತ್ವದ ನಿರೀಕ್ಷೆಯನ್ನು ಹುಟ್ಟುಹಾಕಿದೆ.

ಶಿಕ್ಷಣ ಕ್ಷೇತ್ರದಲ್ಲೂ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಉದ್ದೇಶವನ್ನು ಸರ್ಕಾರ ಪ್ರಕಟಿಸಿದೆ. 6ನೇ ತರಗತಿಯಿಂದ ಕೃತಕ ಬುದ್ಧಿಮತ್ತೆ (AI) ಶಿಕ್ಷಣ ಪರಿಚಯಿಸುವ ಕ್ರಮವು ವಿದ್ಯಾರ್ಥಿಗಳನ್ನು ಭವಿಷ್ಯದ ತಂತ್ರಜ್ಞಾನಾಧಾರಿತ ಉದ್ಯೋಗಗಳಿಗೆ ಸಿದ್ಧಪಡಿಸುವ ಪ್ರಯತ್ನವಾಗಿದೆ. ಇದರ ಜೊತೆಗೆ ಕ್ಲೌಡ್ ಸೀಡಿಂಗ್ ಸೇರಿದಂತೆ ತಂತ್ರಜ್ಞಾನ ಆಧಾರಿತ ಕ್ರಮಗಳಿಗೂ ಸರ್ಕಾರ ಒತ್ತು ನೀಡಿದೆ. ಮಳೆ ಕೊರತೆ ಮತ್ತು ಬರ ಪರಿಸ್ಥಿತಿಯಂತಹ ಸವಾಲುಗಳಿಗೆ ತಂತ್ರಜ್ಞಾನವನ್ನು ಬಳಸಿಕೊಂಡು ಪರಿಹಾರ ಕಂಡುಕೊಳ್ಳುವ ಪ್ರಯತ್ನ ಇದಾಗಿದೆ.

ಸರ್ಕಾರದ ಆಡಳಿತವನ್ನು ಜನಸಾಮಾನ್ಯರಿಗೆ ಇನ್ನಷ್ಟು ಹತ್ತಿರ ತರುವ ಉದ್ದೇಶದಿಂದ ‘ಪ್ರಜಾ ಸೇವೆ’ ಇಲಾಖೆ ಸ್ಥಾಪಿಸುವ ನಿರ್ಧಾರವನ್ನು ಪತ್ರದಲ್ಲಿ ಪ್ರಸ್ತಾಪಿಸಲಾಗಿದೆ. ನೇರ ಮೇಲ್ವಿಚಾರಣೆಯ ಮೂಲಕ ಜನರ ಅಹವಾಲುಗಳಿಗೆ ಸ್ಪಂದಿಸುವ ವ್ಯವಸ್ಥೆ ರೂಪಿಸುವುದು ಇದರ ಉದ್ದೇಶವಾಗಿದೆ.

ಸರ್ಕಾರ ಎಂದರೆ ಕೇವಲ ಈಗಾಗಲೇ ಘೋಷಿಸಿರುವ ಯೋಜನೆಗಳನ್ನು ಜಾರಿಗೊಳಿಸುವುದಲ್ಲ. ಜನರ ಹೊಸ ಅಗತ್ಯಗಳಿಗೆ ಅನುಗುಣವಾಗಿ ನಿರಂತರವಾಗಿ ಬದಲಾಗಬೇಕು ಎಂಬ ಸಂದೇಶವನ್ನೂ ಮುಖ್ಯಮಂತ್ರಿಗಳು ನೀಡಿದ್ದಾರೆ. ಅಗತ್ಯವಿದ್ದಾಗ ನಿರ್ಧಾರಗಳನ್ನು ಮರುಪರಿಶೀಲಿಸುವ ಮತ್ತು ಅಗತ್ಯಕ್ಕೆ ತಕ್ಕಂತೆ ಮಾರ್ಗ ಬದಲಿಸುವ ಧೈರ್ಯವೇ ಉತ್ತಮ ಆಡಳಿತದ ಶಕ್ತಿ ಎಂದು ಅವರು ಹೇಳಿದ್ದಾರೆ.

ಆರ್ಥಿಕವಾಗಿ ಬಲಿಷ್ಠ, ಸಾಮಾಜಿಕವಾಗಿ ಸಬಲೀಕೃತ, ತಂತ್ರಜ್ಞಾನದಲ್ಲಿ ಮುಂದುವರಿದ ಹಾಗೂ ತನ್ನ ಮೌಲ್ಯಗಳು ಮತ್ತು ಸಂಸ್ಕೃತಿಯ ಬೇರುಗಳಿಗೆ ಗಟ್ಟಿಯಾಗಿ ಬದ್ಧವಾಗಿರುವ ಕರ್ನಾಟಕವನ್ನು ನಿರ್ಮಿಸುವುದು ಸರ್ಕಾರದ ಗುರಿ ಎಂದು ಪತ್ರದಲ್ಲಿ ಸ್ಪಷ್ಟಪಡಿಸಲಾಗಿದೆ.

ಮುಂದಿನ ದಿನಗಳು ಸುಲಭವಾಗಿರುವುದಿಲ್ಲ ಎಂಬುದನ್ನೂ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ವಿಶೇಷವಾಗಿ ಬರ ಪರಿಸ್ಥಿತಿ ಎದುರಿಸುತ್ತಿರುವ ರೈತರ ಸಮಸ್ಯೆಗಳು ಸರ್ಕಾರದ ಮುಂದಿರುವ ದೊಡ್ಡ ಸವಾಲುಗಳಲ್ಲಿ ಒಂದಾಗಿದೆ. ಮುಂದಿನ 500 ದಿನಗಳು ಇನ್ನಷ್ಟು ದೃಢಸಂಕಲ್ಪ ಮತ್ತು ಪರಿಶ್ರಮವನ್ನು ಬೇಡುತ್ತವೆ ಎಂದು ಅವರು ಹೇಳಿದ್ದಾರೆ.

“ಕರ್ನಾಟಕ ಅವಕಾಶಗಳಿಗಾಗಿ ಕಾಯುವುದಿಲ್ಲ; ಅವಕಾಶಗಳನ್ನು ಸೃಷ್ಟಿಸುತ್ತದೆ” ಎಂಬ ಆಶಯವನ್ನು ಮುಂದಿಟ್ಟಿರುವ ಡಿಕೆಶಿ ಇದೇ ‘ಕನ್ನಡಿಗರ ಸ್ಫೂರ್ತಿ’ ಎಂದು ಬಣ್ಣಿಸಿದ್ದಾರೆ. 100 ದಿನಗಳ ಸಾಧನೆಗಳನ್ನು ಮುಂದಿಟ್ಟುಕೊಂಡು ಸರ್ಕಾರ ತನ್ನ ಮುಂದಿನ ಪಯಣಕ್ಕೆ ಸಿದ್ಧವಾಗುತ್ತಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಹಿಡಿದು ಉದ್ಯೋಗ, ಹೂಡಿಕೆ, ಶಿಕ್ಷಣ, ತಂತ್ರಜ್ಞಾನ ಮತ್ತು ಜನರ ಅಹವಾಲುಗಳ ಪರಿಹಾರದವರೆಗೆ ಹಲವು ಕ್ಷೇತ್ರಗಳಲ್ಲಿ ಸರ್ಕಾರ ತನ್ನ ಆದ್ಯತೆಗಳನ್ನು ಗುರುತಿಸಿದೆ.

ಕೊನೆಯಲ್ಲಿ, “ನಾವು ನಿರಂತರವಾಗಿ ಕೆಲಸ ಮಾಡುತ್ತೇವೆ. ಉಸಿರು ಇರುವವರೆಗೂ ಕರ್ನಾಟಕ ಮತ್ತು ಕನ್ನಡಿಗರ ಸೇವೆಯಲ್ಲಿರುತ್ತೇವೆ” ಎಂಬ ಭರವಸೆಯನ್ನು ಮುಖ್ಯಮಂತ್ರಿ ಶಿವಕುಮಾರ್ ನೀಡಿದ್ದಾರೆ. ಈ ಭರವಸೆಯನ್ನು ಕಾರ್ಯರೂಪಕ್ಕೆ ತಂದು ‘ದೃಢ ಕರ್ನಾಟಕ’ದ ಸಂಕಲ್ಪವನ್ನು ಸಾಕಾರಗೊಳಿಸುವುದು ಸರ್ಕಾರದ ಮುಂದಿರುವ ಪ್ರಮುಖ ಹೊಣೆಗಾರಿಕೆಯಾಗಿದ್ದು, ಮುಂಬರುವ ದಿನಗಳಲ್ಲಿ ಎಷ್ಟರಮಟ್ಟಿಗೆ ಈ ಎಲ್ಲಾ ಯೋಜನೆಗಳು ಅನುಷ್ಠಾನಗೊಳ್ಳುತ್ತವೆಂದು ಕಾದು ನೋಡಬೇಕಿದೆ.

# ಅತಿ ದೊಡ್ಡ ಶಿವರಾಮಕಾರಂತ ಬಡಾವಣೆ ಕನಸು ಸಾಕಾರ

## ಕಾರಂತ ಬಡಾವಣೆಯಲ್ಲಿ ರೈತರಿಗೆ 18,399 ನಿವೇಶನ



**ಸು**ಮಾರು 18 ವರ್ಷಗಳ ಕಾನೂನು ಹೋರಾಟ, ಆಡಳಿತಾತ್ಮಕ ಅಡೆತಡೆ ಮತ್ತು ನಿರಂತರ ಕಾಯುವಿಕೆಯ ನಂತರ ಉತ್ತರ ಬೆಂಗಳೂರಿನ ಬಹುನಿರೀಕ್ಷಿತ ಡಾ. ಕೆ. ಶಿವರಾಮ ಕಾರಂತ ಬಡಾವಣೆಯಲ್ಲಿ ಭೂಮಿ ಕಳೆದುಕೊಂಡ ರೈತರು ಮತ್ತು ಭೂಮಾಲೀಕರಿಗೆ ನಿವೇಶನ ಹಂಚಿಕೆ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಆಗಸ್ಟ್ 31, 2026ರಂದು ಈ ಮಹತ್ವದ ಪ್ರಕ್ರಿಯೆಯನ್ನು ಅಧಿಕೃತವಾಗಿ ಆರಂಭಿಸಿದೆ. ಸುಪ್ರೀಂಕೋರ್ಟ್ ನಿರ್ದೇಶನದಡಿ ರೂಪುಗೊಂಡಿರುವ ಈ ಬಡಾವಣೆ ಹಲವು ವರ್ಷಗಳಿಂದ ನ್ಯಾಯಾಲಯದ ವಿಚಾರಣೆಗಳಿಂದಾಗಿ ಸ್ಥಗಿತಗೊಂಡಿತ್ತು. ಇದೀಗ ಭೂಮಿ ನೀಡಿದವರ ಹಕ್ಕುಗಳನ್ನು ಆದ್ಯತೆಯಾಗಿ ಪರಿಗಣಿಸಿ ನಿವೇಶನ ಹಂಚಿಕೆ ಆರಂಭವಾಗಿರುವುದು ಯೋಜನೆಯ ಇತಿಹಾಸದಲ್ಲಿ ಮಹತ್ವದ ತಿರುವಾಗಿದೆ. ಬಿಡಿಎ ಅಭಿವೃದ್ಧಿಪಡಿಸಿರುವ ಒಟ್ಟು 24,714 ನಿವೇಶನಗಳ ಪೈಕಿ 18,399 ನಿವೇಶನಗಳನ್ನು ರೈತರು ಮತ್ತು ಭೂಮಾಲೀಕರಿಗೆ ಮೀಸಲಿಡಲಾಗಿದೆ. ಸುಮಾರು 3,200 ಭೂಮಾಲೀಕರಿಗೆ ಈ ಹಂಚಿಕೆ ಪ್ರಕ್ರಿಯೆಯಿಂದ ಪ್ರಯೋಜನವಾಗಲಿದೆ ಎಂದು ವರದಿಗಳು ತಿಳಿಸಿವೆ. ಇನ್ನೂ 3,500 ನಿವೇಶನಗಳನ್ನು ಕಂದಾಯ ನಿವೇಶನದಾರರಿಗೆ ಮತ್ತು 2,815 ನಿವೇಶನಗಳನ್ನು ಸಾರ್ವಜನಿಕರಿಗೆ ಮೀಸಲಿಡಲಾಗಿದೆ.

ಭೂಸ್ವಾಧೀನಕ್ಕೆ ಒಳಗಾದವರಿಗೆ ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಪಾಲು ನೀಡುವ 40:60 ಅಭಿವೃದ್ಧಿ ಮಾದರಿ ಈ ಯೋಜನೆಯ ಪ್ರಮುಖ ಅಂಶವಾಗಿದೆ. ಪ್ರತಿ ಎಕರೆ ಸ್ವಾಧೀನಪಡಿಸಿಕೊಂಡ ಭೂಮಿಗೆ 9,583 ಚದರ ಅಡಿ ಅಭಿವೃದ್ಧಿಪಡಿಸಿದ ನಿವೇಶನದ ಅರ್ಹತೆ ನಿಗದಿಪಡಿಸಲಾಗಿದೆ ಎಂದು ವರದಿಯಾಗಿದೆ.

ಕಾರಂತ ಬಡಾವಣೆಯ ಅಭಿವೃದ್ಧಿಗೆ ಸುಮಾರು ರೂ. 16,419.89 ಕೋಟಿ ವೆಚ್ಚವಾಗಿದೆ ಎಂದು ವರದಿಗಳು ತಿಳಿಸಿವೆ. ಒಟ್ಟು ಯೋಜನೆಯು ಉತ್ತರ ಬೆಂಗಳೂರಿನ ಹಲವು ಗ್ರಾಮಗಳನ್ನು ಒಳಗೊಂಡಿದ್ದು, ಸುಮಾರು 3,069 ಎಕರೆ ಪ್ರದೇಶದಲ್ಲಿ ಬಡಾವಣೆ ರೂಪುಗೊಂಡಿದೆ ಎಂಬುದು ಹಿಂದಿನ ವರದಿಗಳಲ್ಲಿದೆ. ಯೋಜನೆಯ ವ್ಯಾಪ್ತಿಯಲ್ಲಿ 17 ಗ್ರಾಮಗಳು ಸೇರಿವೆ. ಇಷ್ಟು ದೊಡ್ಡ ಪ್ರಮಾಣದ ಭೂಮಿ ಅಭಿವೃದ್ಧಿಪಡಿಸಿ, ಮೂಲಸೌಕರ್ಯ ಕಲ್ಪಿಸಿ, ನಂತರ ಭೂಮಾಲೀಕರಿಗೆ ಪರಿಹಾರವಾಗಿ ನಿವೇಶನ ನೀಡುವುದು ಬಿಡಿಎಗೆ ದೊಡ್ಡ ಆಡಳಿತಾತ್ಮಕ ಸವಾಲಾಗಿತ್ತು. ಹೀಗಾಗಿ ಈ ಹಂಚಿಕೆ ಪ್ರಕ್ರಿಯೆ ಹಲವು ವರ್ಷಗಳಿಂದ ಕಾಯುತ್ತಿದ್ದ ಭೂಮಾಲೀಕರಿಗೆ ಮಹತ್ವದ ಬೆಳವಣಿಗೆಯಾಗಿದೆ. ಸಾರ್ವಜನಿಕರಿಗೂ 2,815 ನಿವೇಶನ-ರೈತರು ಮತ್ತು ಭೂಮಾಲೀಕರ ಹಂಚಿಕೆಯ ಜೊತೆಗೆ ಸಾಮಾನ್ಯ ಸಾರ್ವಜನಿಕರಿಗೂ ಕಾರಂತ ಬಡಾವಣೆಯಲ್ಲಿ ನಿವೇಶನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಆಗಸ್ಟ್ 31ರಿಂದ ಅಕ್ಟೋಬರ್ 15, 2026ರ ಮಧ್ಯಾಹ್ನ 12 ಗಂಟೆಯವರೆಗೆ ಆನ್‌ಲೈನ್ ಅರ್ಜಿಗೆ ಅವಕಾಶ ನೀಡಲಾಗಿದೆ ಎಂದು ಬಿಡಿಎ ಅಧಿಸೂಚನೆ ಆಧಾರಿತ ವರದಿಗಳು ತಿಳಿಸಿವೆ. ಸಾರ್ವಜನಿಕರಿಗೆ ಮೀಸಲಾದ 2,815 ನಿವೇಶನಗಳಲ್ಲಿ 2,500 ನಿವೇಶನಗಳು 9×12 ಮೀಟರ್, 300 ನಿವೇಶನಗಳು 12×18 ಮೀಟರ್ ಮತ್ತು 15 ನಿವೇಶನಗಳು 15×24 ಮೀಟರ್ ಅಳತೆಯದ್ದಾಗಿವೆ.

ಸಾರ್ವಜನಿಕ ನಿವೇಶನಗಳಿಗೆ ಪ್ರತಿ ಚದರ ಅಡಿಗೆ ರೂ. 6,000 ದರ ನಿಗದಿಯಾಗಿದೆ ಎಂದು ಹಲವು ವರದಿಗಳು ತಿಳಿಸಿವೆ. ಆದರೆ BDA ಅಧಿಸೂಚನೆಯಲ್ಲಿ ದರವನ್ನು ಪ್ರತಿ ಚದರ ಮೀಟರ್‌ಗೆ ರೂ. 64,584 ಎಂದು ನಮೂದಿಸಲಾಗಿದ್ದು, 9×12 ಮೀಟರ್ ನಿವೇಶನದ ತಾತ್ಕಾಲಿಕ ಸೈಟ್ ಮೌಲ್ಯ ರೂ. 69,75,072 ಆಗಿದೆ. ಹೀಗಾಗಿ ಸಾಮಾನ್ಯವಾಗಿ 30×40 ಅಡಿ ಎಂದು ಕರೆಯುವ ನಿವೇಶನಕ್ಕೆ ಸುಮಾರು ರೂ. 69.75 ಲಕ್ಷ ಸೈಟ್ ಮೌಲ್ಯ ಬರುತ್ತದೆ. 12×18 ಮೀಟರ್ ನಿವೇಶನಕ್ಕೆ ಸುಮಾರು ರೂ. 1.395 ಕೋಟಿ ಮತ್ತು 15×24 ಮೀಟರ್ ನಿವೇಶನಕ್ಕೆ ಸುಮಾರು ರೂ. 2.325 ಕೋಟಿ ತಾತ್ಕಾಲಿಕ ಮೌಲ್ಯ ನಿಗದಿಯಾಗಿದೆ. ಅಂತಿಮ ಹಂಚಿಕೆ ಸಂದರ್ಭದಲ್ಲಿ ಮೌಲ್ಯದಲ್ಲಿ ಬದಲಾವಣೆ ಸಾಧ್ಯವಿದೆ ಎಂಬುದನ್ನೂ ಅಧಿಸೂಚನೆ ಸ್ಪಷ್ಟಪಡಿಸಿದೆ. ನಿವೇಶನ ಹಂಚಿಕೆ ಪ್ರಕ್ರಿಯೆಯಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸುವಂತೆ ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಭೂಮಾಲೀಕರಿಗೆ ಎಚ್ಚರಿಕೆ ನೀಡಿದ್ದಾರೆ.

ಅರ್ಹ ಫಲಾನುಭವಿಗಳು ನೇರವಾಗಿ ಬಿಡಿಎಯನ್ನೇ ಸಂಪರ್ಕಿಸಬೇಕು ಮತ್ತು ಮಧ್ಯವರ್ತಿಗಳಿಗೆ ಹಣ ನೀಡಬಾರದು ಎಂಬ ಸಂದೇಶ ನೀಡಲಾಗಿದೆ. ಒಟ್ಟಿನಲ್ಲಿ, ಕಾರಂತ ಬಡಾವಣೆ ಕೇವಲ ಮತ್ತೊಂದು ವಸತಿ ಯೋಜನೆಯಲ್ಲ. ಭೂಮಿ ನೀಡಿದ ರೈತರಿಗೆ ದೀರ್ಘಕಾಲದ ನಂತರ ಪರಿಹಾರ, ಸಾರ್ವಜನಿಕರಿಗೆ ಹೊಸ ವಸತಿ ಅವಕಾಶ ಮತ್ತು ಉತ್ತರ ಬೆಂಗಳೂರಿನ ನಗರ ವಿಸ್ತರಣೆಗೆ ಹೊಸ ಆಯಾಮ ನೀಡುವ ಮಹತ್ವದ ಯೋಜನೆಯಾಗಿದೆ. ಆದರೆ ಅರ್ಜಿದಾರರು ಅಧಿಕೃತ BDA ಅಧಿಸೂಚನೆ, ಅರ್ಹತಾ ಷರತ್ತುಗಳು ಮತ್ತು ಪಾವತಿ ವಿವರಗಳನ್ನು ಪರಿಶೀಲಿಸಿಯೇ ಅರ್ಜಿ ಸಲ್ಲಿಸುವುದು ಅತ್ಯಂತ ಮುಖ್ಯ ವಿಷಯವಾಗಿರುತ್ತದೆ. ಈ ಯೋಜನೆಯ ಅಭಿವೃದ್ಧಿಯ ನಂತರ ಮುಂದಿನ ವರ್ಷಗಳಲ್ಲಿ ಅನುಷ್ಠಾನ ಹೇಗೆ ಆಗುತ್ತೆಂಬುದರ ಮೇಲೆ ಅವಲಂಬಿತವಾಗಿದ್ದು, ಅಭಿವೃದ್ಧಿಯ ನೈಜತೆಯ ಬಗ್ಗೆ ಕಾದು ನೋಡಬೇಕಿದೆ.

# ಎಐ ದುರುಪಯೋಗದಿಂದ 1 ಬಿಲಿಯನ್ ಜನರ ಸಾವಿನ ಭೀತಿ

**ನ್ಯೂಯಾರ್ಕ್/ಕ್ಯಾನ್‌ಬೆರ್ರಾ:** ತಪ್ಪು ಕೈಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವು ಅತ್ಯಂತ ಅಪಾಯಕಾರಿಯಾಗಿ ಮಾರ್ಪಡಲಿದ್ದು, ಇದು ಭವಿಷ್ಯದಲ್ಲಿ ಬರೋಬ್ಬರಿ 1 ಬಿಲಿಯನ್ (100 ಕೋಟಿ) ಜನರ ಸಾವಿಗೆ ಕಾರಣವಾಗಬಹುದು ಎಂದು ಮೈಕ್ರೋಸಾಫ್ಟ್ ಸಹ-ಸಂಸ್ಥಾಪಕ ಬಿಲ್ ಗೇಟ್ಸ್ ಆತಂಕಕಾರಿ ಎಚ್ಚರಿಕೆ ನೀಡಿದ್ದಾರೆ.

ಇತ್ತೀಚಿನ ಸಂದರ್ಶನವೊಂದರಲ್ಲಿ ಮಾತನಾಡಿದ ಅವರು, ಎಐ ಪರಿಕರಗಳನ್ನು ದುಷ್ಟ ಶಕ್ತಿಗಳು ದುರುಪಯೋಗಪಡಿಸಿಕೊಂಡರೆ ಅದು ಮಾನವಕುಲ ಇದುವರೆಗೆ ಕಂಡುಕೊಂಡ ಯಾವುದೇ ವಿನಾಶಕಾರಿ ಆಯುಧಕ್ಕಿಂತಲೂ ಹೆಚ್ಚು ಭೀಕರ ಪರಿಣಾಮ ಬೀರಲಿದೆ ಎಂದು ತಿಳಿಸಿದ್ದಾರೆ.

ಕೇವಲ ಕಾರ್ಪೊರೇಟ್ ಹಂತದ ನಿಯಂತ್ರಣಗಳು ಈ ತಂತ್ರಜ್ಞಾನಕ್ಕೆ ಸಾಕಾಗುವುದಿಲ್ಲವಾದ್ದರಿಂದ, ಅಮೆರಿಕ



ಸೇರಿದಂತೆ ವಿಶ್ವದ ಪ್ರಮುಖ ಸರ್ಕಾರಗಳು ತಕ್ಷಣವೇ ಕಟ್ಟುನಿಟ್ಟಿನ ನಿಯಂತ್ರಣ ಹಾಗೂ ಕಾನೂನುಗಳನ್ನು ಜಾರಿಗೆ ತರಬೇಕೆಂದು ಅವರು ಆಗ್ರಹಿಸಿದ್ದಾರೆ.

ಇದೇ ವೇಳೆ, ವಿಶ್ವದಲ್ಲೇ ಮೊದಲ ಬಾರಿಗೆ ಎಐ ಮಾದರಿಯೊಂದು ಆಸ್ಟ್ರೇಲಿಯಾದ ಸರ್ಕಾರಿ ಪೋರ್ಟಲ್ ಒಂದನ್ನು ಹ್ಯಾಕ್ ಮಾಡಿರುವುದು ಜಾಗತಿಕ ಮಟ್ಟದಲ್ಲಿ ಭಾರೀ ಆತಂಕಕ್ಕೆ ಕಾರಣವಾಗಿದೆ. ಓಪನ್ ಎಐ ಸಂಸ್ಥೆಯ ಎಐ ಮಾದರಿಯು ಆಸ್ಟ್ರೇಲಿಯಾದ ಆರೋಗ್ಯ ದತ್ತಾಂಶ ವ್ಯವಸ್ಥೆಗೆ ಅಕ್ರಮವಾಗಿ ನುಸುಳಿ, ಅಲ್ಲಿನ ಆರೋಗ್ಯ ವೆಚ್ಚ ಹಾಗೂ ಔಷಧ ಸಬ್ಸಿಡಿಗಳಿಗೆ ಸಂಬಂಧಿಸಿದ ಪ್ರಮುಖ ಫೈಲ್‌ಗಳನ್ನು ಪ್ರವೇಶಿಸಿದೆ.

ಈ ಗಂಭೀರ ಘಟನೆ ನಡೆದ 54 ದಿನಗಳ ನಂತರ ಓಪನ್ ಎಐ ಆಸ್ಟ್ರೇಲಿಯಾ ಸರ್ಕಾರಕ್ಕೆ ಮಾಹಿತಿ ನೀಡಿದ್ದು, ಇದು ಆಸ್ಟ್ರೇಲಿಯಾ ಪ್ರಧಾನಿ ಆಲ್ಬನೀಸ್ ಅವರ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ. ಅವರು ಓಪನ್ ಎಐ ಸಿಇಒ ಸ್ಯಾಮ್ ಆಲ್ಟ್‌ಮನ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಮಾಹಿತಿ ನೀಡಲು ಮಾಡಿದ ವಿಳಂಬವನ್ನು ತೀವ್ರವಾಗಿ ಖಂಡಿಸಿದ್ದಾರೆ.

ಈ ಘಟನೆಯ ನಂತರ ಆಸ್ಟ್ರೇಲಿಯಾ ಸರ್ಕಾರವು ಸಮಗ್ರ ತನಿಖೆಗೆ ಆದೇಶಿಸಿದ್ದು, ಓಪನ್‌ಎಐ ಸಂಸ್ಥೆಯು ಕ್ರಿಮಿನಲ್ ಆರೋಪಗಳನ್ನು ಎದುರಿಸಬೇಕಾಗುತ್ತದೆಯೇ ಹಾಗೂ ಆಸ್ಟ್ರೇಲಿಯಾದ ಭದ್ರತಾ ಸಂಸ್ಥೆಗಳು ಆರಂಭದಲ್ಲೇ ಈ ಸೈಬರ್ ನುಸುಳುವಿಕೆಯನ್ನು ಪತ್ತೆಹಚ್ಚಲು ಏಕೆ ವಿಫಲವಾದವು ಎಂಬ ಬಗ್ಗೆ ತನಿಖೆ ನಡೆಸುತ್ತಿದೆ. ಘಟನೆಯನ್ನು ಒಪ್ಪಿಕೊಂಡಿರುವ ಓಪನ್‌ಎಐ ಸಿಇಒ ಸ್ಯಾಮ್ ಆಲ್ಟ್‌ಮನ್, ತಮ್ಮ ಎಐ ಮಾದರಿಗಳು ಕಂಪನಿಯು ನಿರೀಕ್ಷಿಸದ ಮತ್ತು ಉದ್ದೇಶಿಸದ ಕೆಲವು ಸ್ವತಂತ್ರ ಕ್ರಮಗಳನ್ನು ತೆಗೆದುಕೊಂಡಿವೆ ಎಂದು ಸಮ್ಮತಿಸಿದ್ದಾರೆ.

ಮಾನವಕುಲವು ಎಐ ಮೇಲಿನ ನಿಯಂತ್ರಣವನ್ನು ಕಳೆದುಕೊಂಡರೆ ಭವಿಷ್ಯದಲ್ಲಿ ಗಂಭೀರ ವಿಕೋಪಗಳು ಸಂಭವಿಸಬಹುದು ಎಂದಿರುವ ಅವರು, ತಂತ್ರಜ್ಞಾನವು ಎಷ್ಟೇ ಶಕ್ತಿಶಾಲಿಯಾಗಿದ್ದರೂ ಅದನ್ನು ಮಾನವನ ನಿಯಂತ್ರಣದಲ್ಲೇ ಇರಿಸಲು ವಿಶ್ವದ ಎಲ್ಲಾ ದೇಶಗಳು ಒಗ್ಗೂಡಿ ಜಾಗತಿಕ ಸುರಕ್ಷತಾ ಮಾನದಂಡಗಳನ್ನು ತಕ್ಷಣವೇ ರೂಪಿಸಬೇಕಾಗಿದೆ ಎಂದು ಪ್ರತಿಪಾದಿಸಿದ್ದಾರೆ.

# ಹೈಕೋರ್ಟ್ ಪೀಠದಿಂದ ಆನೇಕಲ್ಲಿನ ಸೂರ್ಯನಗರ ಕರ್ನಾಟಕ ಗೃಹಮಂಡಳಿ ಬಡಾವಣೆಯ 1,938 ಎಕರೆ ಭೂಸ್ವಾಧೀನ ರದ್ದು



**ಸೂ**ರ್ಯನಗರ 4ನೇ ಹಂತದ ವಸತಿ ಯೋಜನೆಗಾಗಿ ಅನೇಕಲ್ ತಾಲ್ಲೂಕಿನಲ್ಲಿ ಕರ್ನಾಟಕ ಗೃಹ ಮಂಡಳಿ ಕೈಗೊಂಡಿದ್ದ 1.938.13 ಎಕರೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಗೊಳಿಸಿ ಮಹತ್ವದ ತೀರ್ಪು ನೀಡಿದೆ.

ಏಕಸದಸ್ಯ ನ್ಯಾಯಪೀಠದ ಆವೇಶವನ್ನು ಪ್ರಶ್ನಿಸಿ ಕೋನಸಂದ್ರದ ಆರ್.ಗೋವಿಂದರೆಡ್ಡಿ ಸೇರಿದಂತೆ ಇತರರು ಸಲ್ಲಿಸಿದ್ದ ರಿಟ್ ಮೇಲ್ಮನವಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಡಿ.ಕೆ.ಸಿಂಗ್ ಹಾಗೂ ನ್ಯಾಯಮೂರ್ತಿ ಎಚ್. ಶಾಂತಿಭೂಷಣ್ ಅವರಿದ್ದ ವಿಭಾಗೀಯ ನ್ಯಾಯಪೀಠ ಪ್ರಕಟಿಸಿದೆ.

ಈ ಯೋಜನೆಯು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ 268.96 ಚದರ ಕಿ.ಮೀ ಪರಿಸರದ ಸೂಕ್ಷ್ಮವಲಯದ ವ್ಯಾಪ್ತಿಯಲ್ಲಿ ಬರುತ್ತದೆ. ಇಡೀ ಯೋಜನೆ ಇಲ್ಲಿನ ಪರಿಸರ ಮತ್ತು ವನ್ಯಜೀವಿಗಳಿಗೆ ಸಂಬಂಧಿಸಿದ ಜೀವಜಂತುಗಳ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತದೆ' ಎಂದು ನ್ಯಾಯಪೀಠ ಆತಂಕ ವ್ಯಕ್ತಪಡಿಸಿದೆ. ಮಾನವನ ಅಸ್ತಿತ್ವಕ್ಕೆ ವಸತಿ ಮಾತ್ರವೇ ಅಗತ್ಯವಲ್ಲ. ಪರಿಸರ, ವನ್ಯಜೀವಿಗಳು, ಅರಣ್ಯ, ಹೊಳೆಗಳೂ ಸೇರಿದಂತೆ ಪ್ರಕೃತಿಯ ಅನೇಕ ಅಂಶಗಳು ಸಮಾನವಾಗಿ ಆದ್ಯತೆ ಪಡೆದಿರುತ್ತವೆ.

ಪ್ರಸ್ತಾವಿತ ಸೂರ್ಯನಗರ ಯೋಜನೆಯು ಸೂರ್ಯನಗರ ಹಂಚಿಕೆದಾರರಿಗೆ ಮತ್ತು ಸಾರ್ವಜನಿಕರಿಗೆ ಕೈಗೆಟುಕುವ ಹಾಗೂ ಯೋಜಿತ ವಸತಿ ಫ್ಲ್ಯಾಟ್‌ಗಳನ್ನು ನೀಡುವ ಗುರಿಯನ್ನು ಹೊಂದಿರುವುದೇನೊ ಸರಿ. ಆದರೆ, ಇಂತಹ ಒಂದು ಯೋಜನೆಯನ್ನು ಸ್ಥಳಾಂತರಿಸಿ ಅವುಗಳ ನೈಸರ್ಗಿಕ ಆವಾಸ ಸ್ಥಾನವನ್ನು ಕಸಿದುಕೊಳ್ಳುವ ಮೂಲಕ ನಡೆಸುತ್ತಿರುವುದು ದುರದೃಷ್ಟಕರ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಸೂರ್ಯನಗರ ನಾಲ್ಕನೇ ಹಂತದಲ್ಲಿ (ಇಂಡ್ಲವಾಡಿ) 80 ಸಾವಿರ ಆಸನಗಳ ಸಾಮರ್ಥ್ಯದ ಸುಸಜ್ಜಿತವಾದ ಅಂತರ ರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಈ ವರ್ಷದ ಮೇ ತಿಂಗಳಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗಿದೆ. ಆದರೆ, ಈಗ ಭೂ ಸ್ವಾಧೀನ ರದ್ದಾಗಿರುವುದರಿಂದ ಮುಂದೇನು ಎಂಬ ಪ್ರಶ್ನೆ ಎದುರಾಗಿದೆ.

ಮೊದಲ ಹಂತದಲ್ಲಿ ರೂ.1950 ಕೋಟಿ ವೆಚ್ಚದಲ್ಲಿ ಸ್ಟೇಡಿಯಂ ಮತ್ತು ಅದಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳ ನಿರ್ಮಾಣ-ವಿದ್ಯುತ್ ಸೌಲಭ್ಯ ಇತ್ಯಾದಿಗಳನ್ನು ಕಲ್ಪಿಸಲು ಉದ್ದೇಶಿಸಲಾಗಿತ್ತು. ಎರಡನೇ ಹಂತದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಿಸಲಾಗುತ್ತದೆ. ಇದರಲ್ಲಿ ಒಳಾಂಗಣ, ಹೊರಾಂಗಣ ಕ್ರೀಡೆಗಳಿಗೆ ಅವಕಾಶ ಕಲ್ಪಿಸ ಲಾಗುತ್ತದೆ. ಇದಲ್ಲದೆ ಸಮಾವೇಶ ಕೇಂದ್ರ, ಸುಸಜ್ಜಿತವಾದ ಹೋಟೆಲ್ ಇತ್ಯಾದಿ ಸೌಲಭ್ಯ ಗಳನ್ನು ಕಲ್ಪಿಸಿ ಕೊಡಲಾಗುತ್ತದೆ. ಇವೆಲ್ಲವುಗಳಿಗೆ ಸುಮಾರು 21 ಸಾವಿರ ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿತ್ತು ಎಂದು ತಿಳಿದು ಬಂದಿದೆ.

ಇದಲ್ಲದೆ ನಾಲ್ಕನೇ ಹಂತದಲ್ಲಿ ಗೃಹಮಂಡಳಿಯು ನಾಲ್ಕು ಸಾವಿರ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಶೇ 50ರಷ್ಟನ್ನು ಭೂಮಿ ನೀಡಿದ ರೈತರಿಗೆ ಹಾಗೂ ಇನ್ನುಳಿದ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಿದೆ. ನ್ಯಾಯಾಲಯದ ಆದೇಶದಿಂದಾಗಿ ಅವರೆಲ್ಲ ಈಗ ಆತಂಕಕ್ಕೆ ಒಳಗಾಗಿದ್ದಾರೆ.

ಕರ್ನಾಟಕ ಗೃಹ ಮಂಡಳಿಯು ವಸತಿ ಬಡಾವಣೆ ನಿರ್ಮಾಣದ ಉದ್ದೇಶಕ್ಕಾಗಿ ಆನೇಕಲ್ ತಾಲ್ಲೂಕಿನ ಇಂಡಲವಾಡಿ, ಕೋನಸಂದ್ರ, ಕಾಡುಜಕ್ಕನಹಳ್ಳಿ, ಬಗ್ಗನದೊಡ್ಡಿ ಮತ್ತು ಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ 2.220 ಹಾಗೂ 2 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು; ಭೂ ಸ್ವಾಧೀನ ಕಾಯ್ದೆ-1984ರ ಕಲಂ 4(1)ರ ಅಡಿಯಲ್ಲಿ 2013ರ ಅಕ್ಟೋಬರ್ 19ರಂದು ಪ್ರಾಥಮಿಕ ಅಧಿಸೂಚನೆ ಹಾಗೂ ಅಂತಿಮವಾಗಿ 2015ರಲ್ಲಿ ಮೂರು ಹಂತಗಳಲ್ಲಿ 1,938.13 ಗುಂಟೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ ರಾಜ್ಯ ಉಚ್ಚನ್ಯಾಯಾಲಯದ ರದ್ದುಪಡಿಸುವ ತೀರ್ಪಿನಿಂದಾಗಿ ವಸತಿ ಬಡಾವಣೆಯ ಅಭಿವೃದ್ಧಿಯ ಡೋಲಾಯಮಾನವಾಗಿ ಹಲವಾರು ಬಿಕ್ಕಟ್ಟುಗಳಿಗೆ ದಾರಿ ಮಾಡಿದ್ದಲ್ಲದೆ ಭೂಮಾಲೀಕರು ಮತ್ತು ರೈತರಲ್ಲಿ ಆತಂಕ ಉಂಟು ಮಾಡಿದ್ದು ಮುಂದಿನ ಬೆಳವಣಿಗೆಗಳ ಬಗ್ಗೆ ಕಾದು ನೋಡಬೇಕಿದೆ.

# ಜಾಗತಿಕ ಬಿಕ್ಕಟ್ಟಿನ ನಡುವೆ ಭಾರತದ ಪ್ರಗತಿ-ಜಿಡಿಪಿ ಸಾಧನೆ




**ಜಾ**ಗತಿಕ ಮಾರುಕಟ್ಟೆಯ ಏರಿಳಿತಗಳ ನಡುವೆ ಭಾರತದ ದಾಖಲೆ ಶೇ.7.8 ರಷ್ಟು ಜಿಡಿಪಿ ಏರಿಕೆಯಾಗಿದೆ. ಜಾಗತಿಕ ಆರ್ಥಿಕ ಅನಿಶ್ಚಿತತೆ, ತೈಲ ಬೆಲೆಗಳ ಏರಿಳಿತ, ಭೌಗೋಳಿಕ ಸಂಘರ್ಷಗಳು ಹಾಗೂ ಷೇರು ಮಾರುಕಟ್ಟೆಯ ತೀವ್ರ ಅಸ್ಥಿರತೆಯ ನಡುವೆಯೂ ಭಾರತದ ಆರ್ಥಿಕತೆ ತನ್ನ ವೇಗವನ್ನು ಕಾಯ್ದುಕೊಂಡಿದೆ. 2026ರ ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ಭಾರತದ ನೈಜ ಜಿಡಿಪಿ 7.8 ಶೇಕಡಾ ಬೆಳವಣಿಗೆ ದಾಖಲಿಸಿರುವುದು ಆರ್ಥಿಕ ವಲಯದಲ್ಲಿ ಗಮನ ಸೆಳೆದಿದೆ. ರಿಸರ್ವ್ ಬ್ಯಾಂಕ್ ನಿರೀಕ್ಷಿಸಿದ್ದ ಶೇ.7ರ ಬೆಳವಣಿಗೆಗಿಂತಲೂ ಇದು ಹೆಚ್ಚಿನದು. ಈ ಬೆಳವಣಿಗೆ ಕೇವಲ ಒಂದು ಅಂಕಿ ಅಂಶವಲ್ಲ. ಜಗತ್ತಿನ ಹಲವು ಪ್ರಮುಖ ಆರ್ಥಿಕತೆಗಳು ಹಣದುಬ್ಬರ, ದುಬಾರಿ ಇಂಧನ, ದುರ್ಬಲ ಬೇಡಿಕೆ ಮತ್ತು ವ್ಯಾಪಾರ ನೀತಿಯ ಅನಿಶ್ಚಿತತೆಯನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಭಾರತವು ತನ್ನ ಆಂತರಿಕ ಬೇಡಿಕೆಯ ಬಲವನ್ನು ಪ್ರದರ್ಶಿಸಿರುವುದು ವಿಶೇಷ. ಭಾರತದ ಆರ್ಥಿಕತೆಯ ಒಂದು ಕುತೂಹಲಕಾರಿ ವೈರುಧ್ಯ ಈಗ ಕಾಣಿಸುತ್ತಿದೆ. ಒಂದು ಕಡೆ ಜಿಡಿಪಿ ವೇಗವಾಗಿ ಬೆಳೆಯುತ್ತಿದ್ದರೆ, ಮತ್ತೊಂದು ಕಡೆ ಷೇರು ಮಾರುಕಟ್ಟೆ ಅಸ್ಥಿರವಾಗಿದೆ. ಸೆಪ್ಟೆಂಬರ್‌ನಲ್ಲಿ ಜಾಗತಿಕ ಭೌಗೋಳಿಕ ಉದ್ವಿಗ್ನತೆ ಹಾಗೂ ಕಚ್ಚಾ ತೈಲದ ಬೆಲೆ ಏರಿಕೆಯಿಂದ ಭಾರತೀಯ ಷೇರುಪೇಟೆಯಲ್ಲಿ ತೀವ್ರ ಏರಿಳಿತ ಕಂಡುಬಂದಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ 100 ಡಾಲರ್‌ಗಿಂತ ಮೇಲೇರಿರುವುದು ಭಾರತಕ್ಕೆ ವಿಶೇಷ ಸವಾಲಾಗಿದೆ

ಆದರೆ ಷೇರುಪೇಟೆಯ ಚಲನೆ ಮತ್ತು ಜಿಡಿಪಿ ಬೆಳವಣಿಗೆ ಒಂದೇ ಅರ್ಥವನ್ನು ನೀಡುವುದಿಲ್ಲ. ಷೇರುಪೇಟೆ ಮುಖ್ಯವಾಗಿ ಹೂಡಿಕೆದಾರರ ನಿರೀಕ್ಷೆ, ಜಾಗತಿಕ ಬಂಡವಾಳ ಹರಿವು ಮತ್ತು ಭವಿಷ್ಯದ ಲಾಭದ ಅಂದಾಜುಗಳಿಂದ ಪ್ರಭಾವಿತವಾಗುತ್ತದೆ. ಜಿಡಿಪಿ ಮಾತ್ರ ದೇಶದಲ್ಲಿ ವಸ್ತು ಮತ್ತು ಸೇವೆಗಳ ಒಟ್ಟು ಉತ್ಪಾದನೆಯ ವಿಸ್ತರಣೆಯನ್ನು ಅಳೆಯುತ್ತದೆ. ಆಂತರಿಕ ಬೇಡಿಕೆಯೇ ಪ್ರಮುಖ ಶಕ್ತಿ. ಭಾರತದ ಆರ್ಥಿಕ ಬೆಳವಣಿಗೆಯ ಪ್ರಮುಖ ಆಧಾರಗಳಲ್ಲಿ ದೇಶೀಯ ಬಳಕೆ ಮತ್ತು ಹೂಡಿಕೆ ಪ್ರಮುಖವಾಗಿವೆ. ಸರ್ಕಾರದ ಮೂಲ ಅಂದಾಜಿನ ಪ್ರಕಾರ 2025□26ರಲ್ಲಿ ಭಾರತದ ಜಿಡಿಪಿ ಬೆಳವಣಿಗೆ 7.4 ಶೇಕಡಾ ಎಂದು ನಿರೀಕ್ಷಿಸಲಾಗಿತ್ತು. ಈ ಬೆಳವಣಿಗೆಗೆ ಬಳಕೆ ಮತ್ತು ಹೂಡಿಕೆ ಎರಡೂ ಪ್ರಮುಖ ಚಾಲಕ ಶಕ್ತಿಗಳಾಗಿವೆ. ಭಾರತದ ಸುಮಾರು 140 ಕೋಟಿಗೂ ಅಧಿಕ ಜನಸಂಖ್ಯೆಯ ದೊಡ್ಡ ದೇಶೀಯ ಮಾರುಕಟ್ಟೆ ಜಾಗತಿಕ ಆರ್ಥಿಕ ಆಘಾತಗಳ ಪರಿಣಾಮವನ್ನು ಕೆಲವು ಮಟ್ಟಿಗೆ ತಗ್ಗಿಸುವ ಸಾಮರ್ಥ್ಯ ಹೊಂದಿದೆ. ಸೇವಾ ವಲಯ, ಡಿಜಿಟಲ್ ಆರ್ಥಿಕತೆ, ನಿರ್ಮಾಣ, ಮೂಲಸೌಕರ್ಯ ಹೂಡಿಕೆ ಮತ್ತು ಖಾಸಗಿ ಬಳಕೆ ದೇಶೀಯ ಚಟುವಟಿಕೆಯನ್ನು ಬೆಂಬಲಿಸುತ್ತಿವೆ.

ಹೊಸ ಜಿಡಿಪಿ ಲೆಕ್ಕಾಚಾರವೂ ಚರ್ಚೆಗೆ ಕಾರಣ. ಇತ್ತೀಚಿನ ಜಿಡಿಪಿ ಅಂಕಿಅಂಶಗಳ ಕುರಿತು ಆರ್ಥಿಕ ತಜ್ಞರ ನಡುವೆ ಚರ್ಚೆಯೂ ಆರಂಭವಾಗಿದೆ. ಭಾರತದ ರಾಷ್ಟ್ರೀಯ ಲೆಕ್ಕಪತ್ರ ವ್ಯವಸ್ಥೆಯಲ್ಲಿ ಹೊಸ ಮೂಲ ವರ್ಷ 2022□23ಕ್ಕೆ ಬದಲಾವಣೆ ಸೇರಿದಂತೆ ಕೆಲವು ವಿಧಾನಾತ್ಮಕ ಸುಧಾರಣೆಗಳನ್ನು ಜಾರಿಗೆ ತರಲಾಗಿದೆ. ಹೆಚ್ಚು ವಿವರವಾದ ಬೆಲೆ ಸೂಚಕಗಳು ಮತ್ತು ಹೊಸ ದತ್ತಾಂಶ ಮೂಲಗಳನ್ನು ಬಳಸಲಾಗುತ್ತಿದೆ ಎಂದು ಸರ್ಕಾರದ ಅಧಿಕಾರಿಗಳು ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಗಳು ಅಸ್ಥಿರವಾಗಿರುವ ಈ ಸಂದರ್ಭದಲ್ಲಿ ಭಾರತದ ಆರ್ಥಿಕತೆ ತೋರಿಸುತ್ತಿರುವ ವೇಗ ನಿಸ್ಸಂದೇಹವಾಗಿ ಆಶಾದಾಯಕ. ಆದರೆ ದುಬಾರಿ ತೈಲ, ಜಾಗತಿಕ ಸಂಘರ್ಷಗಳು ಮತ್ತು ಹಣಕಾಸು ಮಾರುಕಟ್ಟೆಯ ಒತ್ತಡಗಳನ್ನು ಎದುರಿಸುತ್ತಾ ಈ ವೇಗವನ್ನು ಉದ್ಯೋಗಾಧಾರಿತ, ಸಮಗ್ರ ಮತ್ತು ದೀರ್ಘಕಾಲೀನ ಬೆಳವಣಿಗೆಯಾಗಿ ಪರಿವರ್ತಿಸುವುದು ಮುಂದಿನ ದೊಡ್ಡ ಸವಾಲಾಗಿದೆ. ಜಗತ್ತು ಆರ್ಥಿಕ ಅನಿಶ್ಚಿತತೆಯ ನಡುವೆ ಸಾಗುತ್ತಿರುವಾಗ, ಭಾರತದ 7.8% ಜಿಡಿಪಿ ಬೆಳವಣಿಗೆ ದೇಶೀಯ ಆರ್ಥಿಕತೆಯ ಬಲವನ್ನು ತೋರಿಸುವ ಮಹತ್ವದ ಸೂಚನೆಯಾಗಿದೆ. ಈ ಸಾಧನೆಯ ಹಿಂದೆ ಕೇಂದ್ರ ಸರ್ಕಾರದ ಕಳೆದ ಹತ್ತು ವರ್ಷಗಳ ಆರ್ಥಿಕ ನೀತಿ, ಆಮದು ಮತ್ತು ರಫ್ತಿನ ವ್ಯಾಪಾರ ವ್ಯವಹಾರದಲ್ಲಿ ಸಡಲಿಕೆ ಮತ್ತು ಸೂಕ್ಷ್ಮ ನಿರ್ಧಾರಗಳಲ್ಲದೆ ಆಂತರಿಕ ಉತ್ಪನ್ನಗಳ ದಾಖಲೆ ಉತ್ಪತ್ತಿ ಮತ್ತು ಸಂಗ್ರಹಣೆಯು ಬಹುಪಾಲು ಜಿಡಿಪಿ ಈ ಮಟ್ಟಕ್ಕೆ ಬಲಪಡಿಸಲು ಸಹಾಯ ಮಾಡಿದೆ ಎಂಬುದು ಎರಡನೆ ಮಾತಿಲ್ಲ. ಆದರೆ ಈ ದಾಖಲೆಯ ನಿಜವಾದ ಯಶಸ್ಸು ಅದರ ಲಾಭ ಎಷ್ಟು ವ್ಯಾಪಕವಾಗಿ ಸಾಮಾನ್ಯ ಭಾರತೀಯನ ಬದುಕಿಗೆ ತಲುಪುತ್ತದೆ ಎನ್ನುವುದು ಮುಂಬರುವ ದಿನಗಳಲ್ಲಿ ಕಾದು ನೋಡಬೇಕಿದೆ.

# ಚುನಾವಣೆ ಆಯೋಗದ ಕರ್ತವ್ಯಗಳ ಮತ್ತು ಪಾರದರ್ಶಕತೆ

**ಚುನಾವಣಾ ಆಯೋಗದಿಂದ ಅಖಿಲ ಭಾರತ ಮಾಧ್ಯಮ ಸಮ್ಮೇಳನ:** ಪಾರದರ್ಶಕತೆಗೆ ಇಸಿಐನೆಟ್ ಮತ್ತು 100% ವೆಬ್‌ಕಾಸ್ಟಿಂಗ್‌ಗೆ ಒತ್ತು. ನವದೆಹಲಿಯಲ್ಲಿ ನಡೆದ ಸಮ್ಮೇಳನದಲ್ಲಿ 95 ಕೋಟಿ ಮತದಾರರ ನಿರ್ವಹಣೆ, ಸುಳ್ಳು ಸುದ್ದಿ ನಿಯಂತ್ರಣ ಹಾಗೂ ನೂತನ ತಂತ್ರಜ್ಞಾನಗಳ ಅಳವಡಿಕೆ ಕುರಿತು ಕೇಂದ್ರ ಚುನಾವಣಾ ಆಯೋಗ ಮಹತ್ವದ ಮಾಹಿತಿ ಹಂಚಿಕೊಂಡಿದೆ.

ಭಾರತೀಯ ಚುನಾವಣಾ ಆಯೋಗವು (ECI) ಚುನಾವಣೆ ಮತ್ತು ಮಾಧ್ಯಮಗಳ ಪಾತ್ರದ ಕುರಿತಂತೆ ನವದೆಹಲಿಯ ಇಂಡಿಯಾ ಇಂಟರ್ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಡೆಮಾಕ್ರಸಿ ಅಂಡ್ ಎಲೆಕ್ಷನ್ ಮ್ಯಾನೇಜ್‌ಮೆಂಟ್ (ಐಐಐಡಿಇಎಮ್‌ನಲ್ಲಿ ಶುಕ್ರವಾರ ಅಖಿಲ ಭಾರತೀಯ ಮಾಧ್ಯಮ ಸಮ್ಮೇಳನವನ್ನು ಯಶಸ್ವಿಯಾಗಿ ಆಯೋಜಿಸಿತ್ತು. ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ದೇಶಾದ್ಯಂತ ಆಗಮಿಸಿರುವ ಮಾಧ್ಯಮ ಪ್ರತಿನಿಧಿಗಳನ್ನು ಚುನಾವಣಾ ಆಯೋಗದ ಕುಟುಂಬ' ಎಂದು ಬಣ್ಣಿಸಿದರು.

ನಮ್ಮ ದೇಶದಲ್ಲಿ ಚುನಾವಣೆ ನಡೆಸುವ ಭಾರತೀಯ ಚುನಾವಣಾ ಆಯೋಗವು ಬರೋಬ್ಬರಿ 1.80 ಕೋಟಿ ಸಿಬ್ಬಂದಿಯನ್ನು ಹೊಂದಿದ್ದು ಇದು ವಿಶ್ವದಲ್ಲೇ "ಅತಿದೊಡ್ಡ ಸಿಬ್ಬಂದಿ ಹೊಂದಿರುವ ಏಕೈಕ ಸಂಸ್ಥೆಯಾಗಿದೆ. ನಮ್ಮ ದೇಶದಲ್ಲಿ 95 ಕೋಟಿ ಮತದಾರರಿದ್ದು ಪ್ರತಿವರ್ಷ ಶೇ.9ರಷ್ಟು ಮತದಾರರ ಪಟ್ಟಿಯಲ್ಲಿ ಬದಲಾವಣೆಯಾಗುತ್ತದೆ. ಅಂದರೆ, ಪ್ರತಿ ತಿಂಗಳು ಸುಮಾರು 63 ಲಕ್ಷದಷ್ಟು ಬದಲಾವಣೆಗಳಾಗುತ್ತವೆ ಹಲವು ದೇಶಗಳನ್ನು ಸೇರಿಸಿದರೂ ಭಾರತದ 95 ಕೋಟಿ ಮತದಾರರನ್ನು ಮೀರಿಸಲು ಸಾಧ್ಯವಿಲ್ಲ' ಎಂದು ಅವರು ಹೆಮ್ಮೆಯಿಂದ ನುಡಿದರು.

ಚುನಾವಣಾ ಆಯೋಗದ ಪಾರದರ್ಶಕತೆಗೆ ಇಸಿಐನೆಟ್ ಆಪ್ ಸಾಕ್ಷಿಯಾಗಿದೆ. ಜನವರಿ 26, 2026ರವರೆಗೆ ಈ ಮೊಬೈಲ್ ಆಪ್ ಅನ್ನು 115 ಕೋಟಿಗೂ ಹೆಚ್ಚು ಬಾರಿ ಡೌನ್‌ಲೋಡ್ ಮಾಡಲಾಗಿದೆ. ಆಯೋಗದ ಪ್ರತಿಯೊಂದು ಮಾಹಿತಿಯೂ ಇದರಲ್ಲಿ ಲಭ್ಯವಿದೆ. ಇಲ್ಲಿನ ಪಾರದರ್ಶಕತೆಯು ಪ್ರಶ್ನಾತೀತವಾಗಿದೆ. ಹೀಗಿರುವಾಗ ವೈ ದಿಸ್ ಕೊಲವರಿ?' (ಅನುಮಾನವೇಕೆ?' ಎಂದು ಜ್ಞಾನೇಶ್ ಕುಮಾರ್ ಪ್ರಶ್ನಿಸಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (SIR) ಅಭಿಯಾನದಡಿ ತಳಮಟ್ಟದಲ್ಲಿ ಮತದಾರರ ಪಟ್ಟಿ ತಯಾರಿಸಲಾಗುತ್ತಿದ್ದು ಇದಕ್ಕಾಗಿ 'ದೇಶಾದ್ಯಂತ 12 ಲಕ್ಷ ಬೂತ್ ಮಟ್ಟದ ಅಧಿಕಾರಿಗಳು ಸೇರಿದಂತೆ ಒಟ್ಟು 37 ಲಕ್ಷ ಸಿಬ್ಬಂದಿ ಕಾರ್ಯನಿರತರಾಗಿದ್ದಾರೆ. 95 ಕೋಟಿ ಮತದಾರರ ಪೈಕಿ 60 ಕೋಟಿ ಮತದಾರರ ಖಖಖ ಪೂರ್ಣಗೊಂಡಿದ್ದು ಉಳಿದ 35 ಕೋಟಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಮಾಧ್ಯಮ ವಿಭಾಗದ ಮಹಾನಿರ್ದೇಶಕ ಆಶಿಶ್ ಗೋಯಲ್ ಅವರು ಇತ್ತೀಚಿನ ವಿಧಾನಸಭಾ ಚುನಾವಣೆಗಳ ಅಂಕಿ–ಅಂಶಗಳನ್ನು ಹಂಚಿಕೊಂಡರು 2026ರ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ 6.87 ಕೋಟಿ (ಶೇ.93.70) ಮತದಾರರು ಹಕ್ಕು ಚಲಾಯಿಸಿದ್ದು ಇದು ವಿಶ್ವದಲ್ಲೇ ಅತಿಹೆಚ್ಚು ಸಿಂಗಾಪುರದಲ್ಲಿ (2025) ಶೇ92.83, ಪುದುಚೇರಿಯಲ್ಲಿ ಶೇ.9119, ಅಸ್ಸಾಂನಲ್ಲಿ ಶೇ.86.33, ತಮಿಳುನಾಡಿನಲ್ಲಿ ಶೇ.86.03, ಕೇರಳದಲ್ಲಿ ಶೇ.79.53 ಹಾಗೂ ಬಿಹಾರದಲ್ಲಿ ಶೇ.6725 ರಷ್ಟು ಮತದಾನವಾಗಿದೆ ಎಂದು ಮಾಹಿತಿ ನೀಡಿದರು. ಶಾಲಾ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಇಸಿಐನೆಟ್ ತಂತ್ರಾಂಶದಲ್ಲಿ 'ಎಲೆಕ್ಟೋರಲ್ ಲಿಟ್ರಸಿ ಕ್ಲಬ್–20 ಶೀಘ್ರದಲ್ಲೇ ಆರಂಭವಾಗಲಿದೆ ಎಂದರು.



**ಚುನಾವಣಾ ಪ್ರಕ್ರಿಯೆಯಲ್ಲಿ ವಿಶ್ವಾಸ ಹೆಚ್ಚಿಸಲು ಆಯೋಗದ ನೂತನ ಕ್ರಮಗಳು:**

100% ವೆಬ್‌ಕಾಸ್ಟಿಂಗ್ ಮತದಾನ ಪ್ರಕ್ರಿಯೆಯ ನಿರಂತರ ಮೇಲ್ವಿಚಾರಣೆಗೆ ಎಲ್ಲಾ ಮತಗಟ್ಟೆಗಳಲ್ಲಿ ಶೇ.100ರಷ್ಟು ವೆಬ್‌ಕಾಸ್ಟಿಂಗ್ ವ್ಯವಸ್ಥೆ. ನಿರಂತರ ಸಂವಾದ: 28,000ಕ್ಕೂ ಹೆಚ್ಚು ಪ್ರತಿನಿಧಿಗಳನ್ನು ಒಳಗೊಂಡಂತೆ ರಾಜಕೀಯ ಪಕ್ಷಗಳೊಂದಿಗೆ ನಿರಂತರ ತೊಡಗಿಸಿಕೊಳ್ಳುವಿಕೆ (ಡಿಸೆಂಬರ್ 2025ರ ದತ್ತಾಂಶದಂತೆ). ಇವಿಎಂ ಬ್ಯಾಲೆಟ್ ಸುಧಾರಣೆ: ಅಭ್ಯರ್ಥಿಗಳ ವಿವರ ಮತ್ತು ಗುರುತುಗಳು ಸ್ಪಷ್ಟವಾಗಿ ಕಾಣುವಂತೆ ಬ್ಯಾಲೆಟ್ ಪೇಪರ್‌ಗಳ ಮಾರ್ಪಾಡು Enhanced "Visibility). ಕ್ಯೂಆರ್ (QR) ಆಧಾರಿತ ಭದ್ರತೆ: ಮತ ಎಣಿಕೆ ಕೇಂದ್ರಗಳಲ್ಲಿ ಭದ್ರತೆ ಬಲಪಡಿಸಲು ಕ್ಯೂಆರ್ ಆಧಾರಿತ ಗುರುತಿನ ಚೀಟಿ ವ್ಯವಸ್ಥೆ. ಕಡ್ಡಾಯ ವಿವಿಪ್ಯಾಟ್ ಎಣಿಕೆ: ನಮೂನೆ 17 ಸಿ ಮತ್ತು ಇವಿಎಂ ದತ್ತಾಂಶಗಳ ನಡುವೆ ವ್ಯತ್ಯಾಸ ಕಂಡುಬಂದರೆ, ಕಡ್ಡಾಯವಾಗಿ ವಿವಿಪ್ಯಾಟ್ ಚೀಟಿಗಳ ಎಣಿಕೆ. ವೋಟರ್ ಸ್ಲಿಪ್ ಮಾರ್ಪಾಡು: ಮತದಾರರ ಸರಣಿ ಮತ್ತು ಭಾಗದ ಸಂಖ್ಯೆ ಎದ್ದು ಕಾಣುವಂತೆ ವೋಟರ್ ಇನ್ಫಾರ್ಮೇಶನ್ ಸ್ಲಿಪ್ ಬದಲಾವಣೆ. ಫಲಿತಾಂಶ ಘೋಷಣೆಯಾದ 72 ಗಂಟೆಗಳೊಳಗೆ ಸೂಚ್ಯಂಕ ಕಾರ್ಡ್‌ಗಳು ಮತ್ತು ಅಂಕಿಅಂಶಗಳ ವರದಿಗಳ ಹಂಚಿಕೆ. ಇವೆಲ್ಲಾ ನೂತನ ಮಾರ್ಪಾಡುಗಳ ಅನುಷ್ಠಾನದ ಮೂಲಕ ಜನಜಾಗೃತಿ ಮೂಡಿಸಿ, ಭಾರತೀಯ ಚುನಾವಣೆ ವ್ಯವಸ್ಥೆಯು ಬಲಗೊಳ್ಳುವ ನಿರೀಕ್ಷೆ ಇದೆ ಎಂದು ಮುಖ್ಯ ಚುನಾವಣೆ ಆಯುಕ್ತರು ಮಾಧ್ಯಮ ಪ್ರತಿನಿಧಿಗಳಿಗೆ ಭರವಸೆ ನೀಡಿದರು.

# ಬಿಡಿಎ ವಾಣಿಜ್ಯ ಸಂಕೀರ್ಣಗಳಿಗೆ ಗ್ರಹಣ 8 ವರ್ಷ ಕಳೆದರೂ ಮುಗಿಯದ ನಿರ್ಮಾಣ

**ಬೆಂ**ಗಳೂರಿನ ಹೃದಯ ಭಾಗದಲ್ಲಿರುವ ಕೋಟ್ಯಂತರ ರೂಪಾಯಿ ಮೌಲ್ಯದ ಬಿಡಿಎ ವಾಣಿಜ್ಯ ಸಂಕೀರ್ಣಗಳ ಮರುನಿರ್ಮಾಣ ಯೋಜನೆ ಇದೀಗ ಮತ್ತೆ ಚರ್ಚೆಗೆ ಬಂದಿದೆ. ಸುಮಾರು 15 ಸಾವಿರ ಕೋಟಿಗೂ ಅಧಿಕ ಮೌಲ್ಯದ ಬಿಡಿಎಗೆ ಸೇರಿದ ಏಳು ವಾಣಿಜ್ಯ ಸಂಕೀರ್ಣಗಳನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವ (PPP) ಮಾದರಿಯಲ್ಲಿ ಮರುನಿರ್ಮಿಸಲು ಖಾಸಗಿ ಸಂಸ್ಥೆಗಳಿಗೆ ದೀರ್ಘಾವಧಿ ಗುತ್ತಿಗೆ ನೀಡಲಾಗಿದ್ದು, ಹಲವು ವರ್ಷಗಳು ಕಳೆದರೂ ಯೋಜನೆಗಳು ಪೂರ್ಣಗೊಳ್ಳದಿರುವುದು ವಿವಾದಕ್ಕೆ ಕಾರಣವಾಗಿದೆ.

ಇಂದಿರಾನಗರ, ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್, ಆರ್.ಟಿ. ನಗರ, ಆಸ್ಟಿನ್ ಟೌನ್, ವಿಜಯನಗರ ಹಾಗೂ ಸದಾಶಿವ ನಗರದಲ್ಲಿರುವ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು ಮಲ್ಟಿಪ್ಲೆಕ್ಸ್ ಹಾಗೂ ಮಾಲ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಯೋಜನೆ ರೂಪಿಸಲಾಗಿತ್ತು. ಈ ಏಳು ಸಂಕೀರ್ಣಗಳಲ್ಲಿ ಒಟ್ಟು 566 ಅಂಗಡಿಗಳಿದ್ದು, ಪ್ರಸ್ತುತ ಬಿಡಿಎಗೆ ವರ್ಷಕ್ಕೆ ಸುಮಾರು 7 ಕೋಟಿ ಬಾಡಿಗೆ ಆದಾಯ ಬರುತ್ತಿತ್ತು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

2017–18ರಲ್ಲಿ ಈ ಸಂಕೀರ್ಣಗಳ ಮರುನಿರ್ಮಾಣಕ್ಕಾಗಿ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿತ್ತು. ಇಂದಿರಾನಗರ ಸಂಕೀರ್ಣದ ಅಭಿವೃದ್ಧಿಯನ್ನು Maverick




Holdings ಹಾಗೂ Embassy Group ಪಾಲುದಾರಿಕೆಯಲ್ಲಿ, ಉಳಿದ ಸಂಕೀರ್ಣಗಳನ್ನು ಖಾಸಗಿ ಅಭಿವೃದ್ಧಿದಾರರ ಮೂಲಕ ಕೈಗೊಳ್ಳಲು ಉದ್ದೇಶಿಸಲಾಗಿತ್ತು.

ಯೋಜನೆಯಡಿ 35 ವರ್ಷಗಳ ಗುತ್ತಿಗೆ ಹಾಗೂ ಮತ್ತಷ್ಟು 30 ವರ್ಷ ವಿಸ್ತರಣೆಗೆ ಅವಕಾಶ ಕಲ್ಪಿಸುವ ಮೂಲಕ ಒಟ್ಟು 65 ವರ್ಷಗಳ ಅವಧಿಗೆ ಖಾಸಗಿ ಸಂಸ್ಥೆಗಳಿಗೆ ಅವಕಾಶ ನೀಡಲಾಗಿದೆ ಎಂಬ ಆರೋಪ ಕೇಳಿಬಂದಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆಯಾಗಿದೆ ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಅವರು ಈ ಹಿಂದೆ ಆಕ್ಷೇಪ ವ್ಯಕ್ತಪಡಿಸಿ, ದಾಖಲೆಗಳೊಂದಿಗೆ ದೂರು ನೀಡಿದ್ದರು.

ನಂತರ ಸರ್ಕಾರ ಬದಲಾದ ಸಂದರ್ಭದಲ್ಲಿ ಟೆಂಡರ್ ಪ್ರಕ್ರಿಯೆ ರದ್ದುಗೊಂಡಿತ್ತು. ಆದರೆ ಬಳಿಕ ಇದೇ ಯೋಜನೆಗೆ ಮರುಜೀವ ನೀಡಲಾಗಿದೆ ಎಂಬುದು ಎನ್.ಆರ್. ರಮೇಶ್ ಅವರ ಆರೋಪವಾಗಿದೆ.

ಮರುನಿರ್ಮಾಣಕ್ಕಾಗಿ ಕೆಲವು ಸಂಕೀರ್ಣಗಳ ಹಳೆಯ ಕಟ್ಟಡಗಳನ್ನು ತೆರವುಗೊಳಿಸಲಾಗಿದೆ. ಆದರೆ ವರ್ಷಗಳು ಕಳೆದರೂ ಹೊಸ ಕಟ್ಟಡಗಳ ನಿರ್ಮಾಣ ಪೂರ್ಣಗೊಂಡಿಲ್ಲ. ಇದರಿಂದ ಒಂದೆಡೆ ಸಾರ್ವಜನಿಕ ಆಸ್ತಿಯಿಂದ ನಿರೀಕ್ಷಿತ ಆದಾಯ ಬಾರದಂತಾಗಿದ್ದರೆ, ಮತ್ತೊಂದೆಡೆ ವ್ಯಾಪಾರ ಚಟುವಟಿಕೆಗಳಿಗೂ ಅಡ್ಡಿಯಾಗಿದೆ ಎಂಬ ಆಕ್ಷೇಪಗಳು ಕೇಳಿಬರುತ್ತಿವೆ.

ಮರುನಿರ್ಮಾಣ ಯೋಜನೆಯಡಿ FSI ಅನ್ನು 1ರಿಂದ 2.3ಕ್ಕೆ ಹೆಚ್ಚಿಸುವ ಉದ್ದೇಶವಿದ್ದು, ಇಂದಿರಾನಗರದಲ್ಲಿ 10 ಅಂತಸ್ತಿನ ಕಚೇರಿ ಟವರ್ ಹಾಗೂ ಐದು ಅಂತಸ್ತಿನ ಶಾಪಿಂಗ್ ಟವರ್ ನಿರ್ಮಿಸುವ ಪ್ರಸ್ತಾವನೆ ಇದೆ. ಎಚ್ ಎಸ್‌ಆರ್ ಲೇಔಟ್‌ನಲ್ಲಿ ಎಂಟು ಅಂತಸ್ತಿನ ಕಟ್ಟಡ ನಿರ್ಮಿಸುವ ಯೋಜನೆಯೂ ಇದೆ.

PPP ಮಾದರಿಯಲ್ಲಿ ಖಾಸಗಿ ಸಂಸ್ಥೆಗಳು ಸುಮಾರು 700 ಕೋಟಿ ಹೂಡಿಕೆ ಮಾಡಲಿದ್ದು, ಮರುನಿರ್ಮಾಣದ ಬಳಿಕ ಬಿಡಿಎಗೆ ವಾರ್ಷಿಕ 38ರಿಂದ 40 ಕೋಟಿ ಆದಾಯ ಬರಲಿದೆ ಎಂಬ ಲೆಕ್ಕಾಚಾರವನ್ನು ಯೋಜನೆಯಲ್ಲಿ ನೀಡಲಾಗಿದೆ.

ಇಂದಿರಾನಗರದಲ್ಲಿ ಆದಾಯ ಹಂಚಿಕೆ 65:35ರ ಅನುಪಾತದಲ್ಲಿದ್ದು, ಉಳಿದ ಯೋಜನೆಗಳಲ್ಲಿ 70:30ರ ಅನುಪಾತದ ಪ್ರಸ್ತಾವನೆ ಇದೆ ಎನ್ನಲಾಗಿದೆ. ಗುತ್ತಿಗೆ ಅವಧಿ ಪೂರ್ಣಗೊಂಡ ಬಳಿಕ ಅಭಿವೃದ್ಧಿಪಡಿಸಿದ ಆಸ್ತಿಗಳು ಬಿಡಿಎಗೆ ಮರಳಲಿವೆ ಎಂಬುದು ಯೋಜನೆಯ ಪ್ರಮುಖ ಅಂಶ.

ಕೋರಮಂಗಲ ಹಾಗೂ ಎಚ್‌ಎಸ್ ಆರ್ ಲೇಔಟ್ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ವ್ಯಾಪಾರಿಗಳು ಮತ್ತು ನಿವಾಸಿಗಳ ಸಂಘಟನೆಗಳು ಯೋಜನೆಗೆ ವಿರೋಧ ವ್ಯಕ್ತಪಡಿಸಿವೆ. ಮರುನಿರ್ಮಾಣದ ಬಳಿಕ ಅಂಗಡಿಗಳ ಬಾಡಿಗೆ ಹೆಚ್ಚಾಗುವ ಸಾಧ್ಯತೆ, ಸ್ಥಳೀಯ ಸಣ್ಣ ವ್ಯಾಪಾರಿಗಳಿಗೆ ತೊಂದರೆ ಹಾಗೂ ವಾಹನ ದಟ್ಟಣೆ ಹೆಚ್ಚಾಗುವ ಆತಂಕವನ್ನು ಅವರು ವ್ಯಕ್ತಪಡಿಸಿದ್ದಾರೆ.

# ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ಗೌರಿ–ಗಣೇಶ ಹಬ್ಬಕ್ಕೆ ಅತ್ಯಂತ ವಿಶೇಷವಾದ ಸ್ಥಾನವಿದೆ

**ಈ** ಹಬ್ಬವನ್ನು ಕೇವಲ ಧಾರ್ಮಿಕ ಆಚರಣೆಯಾಗಿ ನೋಡದೆ, ಇಡೀ ದೇಶವನ್ನು ಒಗ್ಗೂಡಿಸುವ ಒಂದು ಸಂಭ್ರಮವಾಗಿ ಆಚರಿಸಲಾಗುತ್ತದೆ. 2026ನೇ ಸಾಲಿನ ಸ್ವರ್ಣ ಗೌರಿ ವ್ರತ ಹಾಗೂ ಗಣೇಶ ಹಬ್ಬವನ್ನು ಸೆಪ್ಟೆಂಬರ್ 14, 2026 ರಂದು ಸೋಮವಾರ ದಂದು ಆಚರಿಸಲಾಯಿತು. ಹಬ್ಬದ ಅಂಗವಾಗಿ ಧಾರ್ಮಿಕ ವಿಧಿ–ವಿಧಾನಗಳು ನೆರವೇರಿದವು. ಭಕ್ತರು ವಿಶೇಷ ಪೂಜೆ, ಪ್ರಾರ್ಥನೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಗಣೇಶನ ಕೃಪೆಗೆ ಪಾತ್ರರಾದರು. ಸ್ವರ್ಣಗೌರಿ ವ್ರತದ ಅಂಗವಾಗಿಯೂ ವಿಶೇಷ ಪೂಜೆ ಹಾಗೂ ಆಚರಣೆಗಳು ನಡೆದವು. 2026ರ ಗಣೇಶ ಚತುರ್ಥಿಯನ್ನು ಭಾರತದೆಲ್ಲೆಡೆ ಸೆಪ್ಟೆಂಬರ್ 14ರಂದು ಭಕ್ತಿಭಾವದಿಂದ ಆಚರಿಸಲಾಯಿತು. ಹತ್ತು ದಿನಗಳ ಗಣೇಶೋತ್ಸವದ ಸಮಾರೋಪ ಸೆಪ್ಟೆಂಬರ್ 25ರ ಅನಂತ ಚತುರ್ದಶಿಯಂದು ಗಣೇಶ ಮೂರ್ತಿಗಳ ವಿಸರ್ಜನೆಯೊಂದಿಗೆ ನಡೆಯಿತು. ಬೆಂಗಳೂರಿನ ಸ್ಥಳೀಯ ಪಂಚಾಂಗದ ಪ್ರಕಾರ ಸೆ.14ರಂದು ಮಧ್ಯಾಹ್ನ 11.02ರಿಂದ 1.28ರವರೆಗೆ ಗಣೇಶ ಪೂಜೆಯ ಮುಹೂರ್ತವಿತ್ತು. ಗಣೇಶ ಚತುರ್ಥಿಯ ಹಿನ್ನೆಲೆಯಲ್ಲಿ ಮನೆಗಳು ಹಾಗೂ ವಿವಿಧ ಸ್ಥಳಗಳಲ್ಲಿ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು. ಬೆಳಗ್ಗಿನಿಂದಲೇ ಭಕ್ತರು ದೇವಾಲಯಗಳಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ಹಲವೆಡೆ ಭಜನೆ, ಪ್ರಸಾದ ವಿತರಣೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಮುಂಬೈ, ಪುಣೆ, ಬೆಂಗಳೂರು, ಹೈದರಾಬಾದ್, ದೆಹಲಿ, ಚೆನ್ನೈ, ಅಹಮದಾಬಾದ್ ಸೇರಿದಂತೆ ದೇಶದ ವಿವಿಧ ನಗರಗಳಲ್ಲಿ ಮನೆಗಳು, ದೇವಸ್ಥಾನಗಳು ಹಾಗೂ ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳು ವಿಶೇಷ ಅಲಂಕಾರಗಳೊಂದಿಗೆ ಗಣೇಶನನ್ನು ಪ್ರತಿಷ್ಠಾಪಿಸಿದವು. ಮುಂಬೈನಲ್ಲಿ ಪ್ರಮುಖ ಸಾರ್ವಜನಿಕ ಮಂಡಳಿಗಳ ಪೆಂಡಾಲ್‌ಗಳಿಗೆ ಭಾರಿ ಜನಸಂದಣಿ ಕಂಡುಬಂದರೆ, ಪುಣೆಯಲ್ಲಿ ಗಣೇಶೋತ್ಸವವು ಧಾರ್ಮಿಕ ಆಚರಣೆಯ ಜೊತೆಗೆ ಕಲೆ, ಇತಿಹಾಸ ಮತ್ತು ಸಾಂಸ್ಕೃತಿಕ ಪ್ರದರ್ಶನಗಳ ವೇದಿಕೆಯಾಯಿತು. ಗೌರಿ–ಗಣೇಶ ಹಬ್ಬವನ್ನು ಮನೆಮನೆಗಳಲ್ಲಿ ಹಾಗೂ ಸಾರ್ವಜನಿಕವಾಗಿ ಆಚರಿಸಲಾಯಿತು. ಬಸವನಗುಡಿಯ ಐತಿಹಾಸಿಕ ದೊಡ್ಡ ಗಣಪತಿ ದೇವಸ್ಥಾನದಲ್ಲಿ ಮುಂಜಾನೆಯಿಂದಲೇ ಭಕ್ತರ ದಟ್ಟಣೆ ಕಂಡುಬಂದಿತು. ವಿಶೇಷ ಪೂಜೆ, ಅಭಿಷೇಕ, ಅಲಂಕಾರ ಹಾಗೂ ಪ್ರಸಾದ ವಿತರಣೆ ನಡೆಯಿತು. ಗಣೇಶೋತ್ಸವದಲ್ಲಿ ಪರಿಸರ ಸ್ನೇಹಿ ಮೂರ್ತಿಗಳಿಗೆ ಹೆಚ್ಚಿನ ಒತ್ತು ನೀಡಿರುವುದು ಗಮನಾರ್ಹ. ಮಣ್ಣಿನಿಂದ ಹಾಗೂ ನೈಸರ್ಗಿಕ ವಸ್ತುಗಳಿಂದ ತಯಾರಿಸಿದ ಗಣೇಶ ಮೂರ್ತಿಗಳನ್ನು ಬಳಸಲು ಸಾರ್ವಜನಿಕರಲ್ಲಿ ಆಸಕ್ತಿ ಹೆಚ್ಚಾಗಿತ್ತು. ಗೌರಿಗಣೇಶ ವಿಸರ್ಜನೆಗಾಗಿ ಬೆಂಗಳೂರಿನ ಐದು ನಗರ ನಿಗಮ ವ್ಯಾಪ್ತಿಯಲ್ಲಿ 42 ಕೆರೆ ಆವರಣಗಳು/ ತಾತ್ಕಾಲಿಕ ವಿಸರ್ಜನಾ ಟ್ಯಾಂಕ್‌ಗಳು ಮತ್ತು 659 ಮೊಬೈಲ್ ಟ್ಯಾಂಕ್‌ಗಳನ್ನು ಜಿಬಿಎ ಮತ್ತು ಪಾಲಿಕೆ ಸಿಬ್ಬಂದಿಗಳಿಂದ ವ್ಯವಸ್ಥೆ ಮಾಡಲಾಗಿತ್ತು. ಇದರಿಂದ ದೊಡ್ಡ ಕೆರೆಗಳಲ್ಲಿ ಮಾಲಿನ್ಯ ಉಂಟಾಗದಂತೆ ಸ್ಥಳೀಯ ಮಟ್ಟದಲ್ಲೇ ವಿಸರ್ಜನೆಗೆ ಅವಕಾಶ ಕಲ್ಪಿಸಲಾಯಿತು.

ಮಹಾರಾಷ್ಟ್ರದ ಗಣೇಶೋತ್ಸವಕ್ಕೆ 2026 ರಲ್ಲೂ ವಿಶಿಷ್ಟ ವೈಭವ ಮುಂದುವರಿಯಿತು. ಮುಂಬೈನಲ್ಲಿ ಲಾಲ್‌ಬಾಗ್ಚಾ ರಾಜಾ, GSB ಸೇವಾ ಮಂಡಳ್ ಸೇರಿದಂತೆ ಪ್ರಸಿದ್ಧ ಗಣಪತಿ ಮಂಡಳಿಗಳಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡರು. ಅಲಂಕೃತ ವಾಹನಗಳು, ಡೊಳ್ಳು–ತಾಳ, ಮೆರವಣಿಗೆಗಳು ಹಾಗೂ ಸಾರ್ವಜನಿಕ ಪೆಂಡಾಲ್‌ಗಳು ನಗರದ ಹಬ್ಬದ ವಾತಾವರಣವನ್ನು ಮತ್ತಷ್ಟು ರಂಗೇರಿಸಿದವು. ಪುಣೆಯಲ್ಲಿ ಗಣೇಶೋತ್ಸವದ ಸಂದರ್ಭದಲ್ಲಿ ಕರ್ನಾಟಕದ ಹಾಸನ ಜಿಲ್ಲೆಯ ಪ್ರಸಿದ್ಧ ಚೆನ್ನಕೇಶವ ದೇವಾಲಯದ ಪ್ರತಿಕೃತಿಯನ್ನು ನಿರ್ಮಿಸಲಾಗಿತ್ತು. ಧಾರ್ಮಿಕ ಆಚರಣೆಯೊಂದಿಗೆ ಭಾರತೀಯ ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವ ಪ್ರಯತ್ನವೂ ಇದರಲ್ಲಿ ಕಾಣಿಸಿತು. ಸೆಪ್ಟೆಂಬರ್ 25ರಂದು ಅನಂತ ಚತುರ್ದಶಿಯ



ಹಿನ್ನೆಲೆಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ಗಣೇಶ ವಿಸರ್ಜನೆ ನಡೆಯಿತು. ಮಹಾರಾಷ್ಟ್ರದ ಪ್ರಮುಖ ನಗರಗಳಲ್ಲಿ ಭವ್ಯ ಮೆರವಣಿಗೆಗಳು ನಡೆದಿದ್ದು, ಪೊಲೀಸರು ಮತ್ತು ಸ್ಥಳೀಯ ಸಂಸ್ಥೆಗಳು ಜನ ಸಂದಣಿ ನಿಯಂತ್ರಣ, ಸಂಚಾರ ಮತ್ತು ಸುರಕ್ಷತೆ ಗಾಗಿ ವಿಶೇಷ ವ್ಯವಸ್ಥೆ ಮಾಡಿದ್ದವು. ಗಣೇಶೋತ್ಸವದ ವಿಶೇಷತೆ ಎಂದರೆ–ಭಕ್ತಿ ಮತ್ತು ಸಂಭ್ರಮದ ಜೊತೆಗೆ ಪರಿಸರ ಸಂರಕ್ಷಣೆಯ ಸಂದೇಶವೂ ಹೆಚ್ಚು ಸ್ಪಷ್ಟವಾಗಿ ಕಾಣಿಸಿಕೊಂಡದ್ದು. ಮಣ್ಣಿನ ಮೂರ್ತಿ, ಕೃತಕ ವಿಸರ್ಜನಾ ಟ್ಯಾಂಕ್, ಸ್ಥಳೀಯ ಮಟ್ಟದ ಮೊಬೈಲ್ ಟ್ಯಾಂಕ್‌ಗಳು ಮತ್ತು ಸಾಂಸ್ಕೃತಿಕ ಪ್ರದರ್ಶನಗಳು ಮುಂದಿನ ವರ್ಷಗಳ ಗಣೇಶೋತ್ಸವಕ್ಕೆ ಹೊಸ ಮಾದರಿಯನ್ನು ರೂಪಿಸುವ ಸಾಧ್ಯತೆಯನ್ನು ತೋರಿಸಿವೆ.

# 5 ಕೆಜಿ ತೂಕದ ಲಡ್ಡು 1 ಕೋಟಿಗೆ ಮಾರಾಟ



ಬಂಡ್ಲಗುಡ: ಹೈದರಾಬಾದ್‌ನ ಬಂಡ್ಲಗುಡ ಜಾಗೀರ್ ಪ್ರದೇಶ ದಲ್ಲಿರುವ ಕೀರ್ತಿ ರಿಚ್‌ಮಂಡ್ ವಿಲ್ಲಾಸ್‌ನ ಗಣೇಶೋತ್ಸವದಲ್ಲಿ ಐದು ಕೆಜಿ ತೂಕದ ಗಣೇಶ ಪ್ರಸಾದದ ಲಡ್ಡೂ ಹರಾಜಿನಲ್ಲಿ ಒಂದು ಕೋಟಿ ಒಂದು ಲಕ್ಷ ರೂಪಾಯಿಗೆ ಮಾರಾಟವಾಗಿದೆ. ಈ ಬಾರಿಯ ಹರಾಜಿನಲ್ಲಿ ವಿಲ್ಲಾದ ನಿವಾಸಿಗಳ ಶಕ್ತಿಮಾನ್ ಗುಂಪು ಎಂಬ ಒಕ್ಕೂಟವು ಒಟ್ಟಾಗಿ ಹಣವನ್ನು ಸಂಗ್ರಹಿಸಿ ಈ ಲಡ್ಡೂವನ್ನು ಖರೀದಿಸಿದೆ.

ಈ ಸಮಾಜದಲ್ಲಿ 2016ರಲ್ಲಿ ಕೇವಲ ಇಪ್ಪತ್ತೈದು ಸಾವಿರ ರೂಪಾಯಿಗೆ ಪ್ರಾರಂಭವಾದ ಈ ಲಡ್ಡೂ ಹರಾಜು ಪದ್ಧತಿಯು ಇಂದು ಕೋಟಿಗಳ ಮಟ್ಟಕ್ಕೆ ತಲುಪಿದೆ. ಇಲ್ಲಿನ ನಿವಾಸಿಗಳು ಈ ಲಡ್ಡೂವನ್ನು ಕೇವಲ ಪ್ರಸಾದವೆಂದು ಭಾವಿಸದೆ ಸಮೃದ್ಧಿ ಮತ್ತು ಅದೃಷ್ಟದ ಸಂಕೇತವೆಂದು ನಂಬುತ್ತಾರೆ. ಹರಾಜಿನಿಂದ ಸಂಗ್ರಹವಾದ ಈ ಎಲ್ಲಾ ಹಣವನ್ನು ಧರ್ಮಾರ್ಥ ಕಾರ್ಯಗಳಿಗಾಗಿ ನೀಡಲಾಗುತ್ತದೆ.

ಆರ್ ವಿ ದಿಯಾ ಚಾರಿಟೇಬಲ್ ಟ್ರಸ್ಟ್ ಮುಖಾಂತರ ಈ ಹಣವನ್ನು ಬಡ ಮಕ್ಕಳ ಶಿಕ್ಷಣ, ರೋಗಿಗಳ ವೈದ್ಯಕೀಯ ವೆಚ್ಚ ಮತ್ತು ಸುಮಾರು ಅರವತ್ತು ಬಿನ್ನ ಲಾಭದಾಯಕ ಸಂಸ್ಥೆಗಳ ಸಾಮಾಜಿಕ ಸೇವೆಗಳಿಗೆ ಬಳಸಲಾಗುತ್ತದೆ. ಕಳೆದ ವರ್ಷ ಈ ಸಂಸ್ಥೆಯು ಸಂಗ್ರಹಿಸಿದ ಹಣದಿಂದ ಏಳುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವು ನೀಡಲಾಗಿತ್ತು.

# ಹೆಸರಘಟ್ಟ ಉಳಿದರೆ ಬೆಂಗಳೂರು ಉಳಿಯುತ್ತದೆ

## ಜಲಾಶಯ ಮಾತ್ರವಲ್ಲ, ನಗರದ ಪರಿಸರದ ಜೀವನಾಡಿಯಾಗಿರುವ ಅರ್ಕಾವತಿ ಜಲಾನಯನ ಪ್ರದೇಶ



**ಬೆ**ಂಗಳೂರು ನಗರದ ನೀರಿನ ಇತಿಹಾಸದಲ್ಲಿ ಹೆಸರಘಟ್ಟ ಜಲಾಶಯಕ್ಕೆ ವಿಶಿಷ್ಟ ಸ್ಥಾನವಿದೆ. ಇಂದು ನಗರವು ಭೀಕರ ನೀರಿನ ಒತ್ತಡ, ಅಂತರ್ಜಲ ಕುಸಿತ, ಹೆಚ್ಚುತ್ತಿರುವ ನಗರೀಕರಣ ಮತ್ತು ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ, ಹೆಸರಘಟ್ಟದ ಮಹತ್ವ ಮತ್ತೊಮ್ಮೆ ಚರ್ಚೆಗೆ ಬಂದಿದೆ. ಇದು ಕೇವಲ ಒಣಗುತ್ತಿರುವ ಜಲಾಶಯವಲ್ಲ; ಸಾವಿರಾರು ಎಕರೆಗಳ ಜಲಾನಯನ ಪ್ರದೇಶ, ಹುಲ್ಲುಗಾವಲು, ಪಕ್ಷಿಗಳ ಆವಾಸಸ್ಥಾನ ಮತ್ತು ಬೆಂಗಳೂರಿನ ಪರಿಸರ ಸಮತೋಲನಕ್ಕೆ ಅಗತ್ಯವಾದ ನೈಸರ್ಗಿಕ ಸಂಪತ್ತು. 1895ರಲ್ಲಿ ಅರ್ಕಾವತಿ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಹೆಸರಘಟ್ಟ ಜಲಾಶಯವು ಸುಮಾರು 1,500 ಎಕರೆ ವಿಸ್ತೀರ್ಣ ಹೊಂದಿತ್ತು. ಒಂದು ಕಾಲದಲ್ಲಿ ಇದೇ ಜಲಾಶಯ ಬೆಂಗಳೂರಿನ ಕುಡಿಯುವ ನೀರಿನ ಪ್ರಮುಖ ಮೂಲವಾಗಿತ್ತು. ಒಂದು ಶತಮಾನಕ್ಕೂ ಹೆಚ್ಚು ಕಾಲ ನಗರಕ್ಕೆ ನೀರು ಪೂರೈಸಿದ ಹೆಸರಘಟ್ಟ, ಕೇವಲ ಜಲಾಶಯವಾಗಿರಲಿಲ್ಲ. ಜನರ ಪಾಲಿಗೆ ಅದು ಪ್ರವಾಸಿ ತಾಣವೂ ಆಗಿತ್ತು. ದೋಣಿ ವಿಹಾರ, ಗಾಳಿ ಸರ್ಫಿಂಗ್, ಪಿಕ್ನಿಕ್ ಸೇರಿದಂತೆ ವಿವಿಧ ಚಟುವಟಿಕೆಗಳಿಗೆ ಇದು ಹೆಸರಾಗಿತ್ತು.

ಆದರೆ ಬೆಂಗಳೂರು ಬೆಳೆಯುತ್ತಿದ್ದಂತೆ ನೀರಿನ ಬೇಡಿಕೆಯೂ ಹೆಚ್ಚಾಯಿತು. ಜನಸಂಖ್ಯೆ ಹೆಚ್ಚಿತು, ನಗರ ವ್ಯಾಪ್ತಿ ವಿಸ್ತರಿಸಿತು. 1989ರಲ್ಲಿ ಹೆಸರಘಟ್ಟ ಜಲಾಶಯ ಕೊನೆಯ ಬಾರಿ ತುಂಬಿ ಹರಿದಿದೆ ಎನ್ನುವುದು ಅದರ ದುರಂತದ ಸಂಕೇತವಾಗಿದೆ. ಮಳೆಯ ಕೊರತೆ, ಜಲಾನಯನ ಪ್ರದೇಶದ ಬದಲಾವಣೆ, ಅತಿಯಾದ ನಗರೀಕರಣ ಹಾಗೂ ನೀರಿನ ಬೇಡಿಕೆಯ ಹೆಚ್ಚಳ ಇವೆಲ್ಲವೂ ಸೇರಿ ಜಲಾಶಯದ ಸ್ಥಿತಿಯನ್ನು ದುರ್ಬಲಗೊಳಿಸಿವೆ.

Film City ಯೋಜನೆಯ ವಿವಾದ–ಹೆಸರಘಟ್ಟ ಪ್ರದೇಶದಲ್ಲಿ ಸಿನಿಮಾ ನಗರ ನಿರ್ಮಿಸುವ ಚಿಂತನೆಯೂ ಒಂದು ಹಂತದಲ್ಲಿ ಮುನ್ನೆಲೆಗೆ ಬಂದಿತ್ತು. 2012ರಲ್ಲಿ ಪ್ರದೇಶವನ್ನು Film Cityಯಾಗಿ ಅಭಿವೃದ್ಧಿಪಡಿಸುವ ಕುರಿತು ಸರ್ಕಾರ ಯೋಜನೆ ರೂಪಿಸಿತ್ತು. ಇದಕ್ಕೆ ಪರಿಸರವಾದಿಗಳು ಮತ್ತು ಸ್ಥಳೀಯ ಸಂಘಟನೆಗಳಿಂದ ವಿರೋಧ ವ್ಯಕ್ತವಾಯಿತು. ಅರ್ಕಾವತಿ ನದಿ ಪುನಶ್ಚೇತನ ಸಮಿತಿ ಸೇರಿದಂತೆ ಸಂಘಟನೆಗಳು ಹೈಕೋರ್ಟ್ ಮೊರೆ ಹೋಗಿದ್ದವು.

Conservation Reserveಗೆ ಪ್ರಸ್ತಾವನೆ–ಹೆಸರಘಟ್ಟ–ಅರ್ಕಾವತಿ ಪ್ರದೇಶದ ಸುಮಾರು 5,000 ಎಕರೆ ಭೂಮಿಯನ್ನು Wildlife Protection Act, 1972ರ ಸೆಕ್ಷನ್ 36ಎ ಅಡಿಯಲ್ಲಿ "Conservation Reserve" ಎಂದು ಘೋಷಿಸುವ ಪ್ರಸ್ತಾವನೆ ರೂಪಿಸಲಾಗಿತ್ತು. ಪರಿಸರ ತಜ್ಞರು, ಜೀವಶಾಸ್ತ್ರಜ್ಞರು ಮತ್ತು ಪಕ್ಷಿಶಾಸ್ತ್ರಜ್ಞರ ಸಹಕಾರದಿಂದ ಈ ಪ್ರಸ್ತಾವನೆ ಸಿದ್ಧಪಡಿಸಿ ಅರಣ್ಯ ಇಲಾಖೆಗೆ ಸಲ್ಲಿಸಲಾಗಿತ್ತು ಎನ್ನಲಾಗಿದೆ. ಅರಣ್ಯ ಇಲಾಖೆಯು ಪ್ರದೇಶದ ಸಮೀಕ್ಷೆ ನಡೆಸಿ ಪ್ರಸ್ತಾವಿತ ಮೀಸಲು ಪ್ರದೇಶದ ಗಡಿಗಳನ್ನು ಗುರುತಿಸಿದರೂ, ಮುಂದಿನ ಹಂತವಾದ ರಾಜ್ಯ ವನ್ಯಜೀವಿ ಮಂಡಳಿಯ ಅನುಮೋದನೆ ಸೇರಿದಂತೆ ಅಗತ್ಯ ಪ್ರಕ್ರಿಯೆಗಳು ಪೂರ್ಣಗೊಂಡಿಲ್ಲ ಎಂಬುದು ಪ್ರಮುಖ ವಿಚಾರ. ಇದು ಕೇವಲ ಒಂದು ಸರ್ಕಾರಿ ಕಡತದ ವಿಷಯವಲ್ಲ. ಬೆಂಗಳೂರಿನ ಭವಿಷ್ಯದ ನೀರು, ಪರಿಸರ ಮತ್ತು ಹವಾಮಾನ ಸುರಕ್ಷತೆಯ ಪ್ರಶ್ನೆಯಾಗಿದೆ.

2012ರ ವೇಳೆಗೆ ಹೆಸರಘಟ್ಟ ಪ್ರದೇಶವನ್ನು ಈಟಟಟ ಉಣಥಿಯಾಗಿ ಅಭಿವೃದ್ಧಿಪಡಿಸುವ ಚಿಂತನೆ ಮುನ್ನೆಲೆಗೆ ಬಂದಿತು. ಇದಕ್ಕೆ ಪರಿಸರವಾದಿಗಳು ತೀವ್ರ ವಿರೋಧ ವ್ಯಕ್ತಪಡಿಸಿದರು. ಅರ್ಕಾವತಿ ಮತ್ತು ಹೆಸರಘಟ್ಟದ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿ ಯೋಜನೆಗಳಿಂದ ರಕ್ಷಿಸಬೇಕು ಎಂದು ಒತ್ತಾಯಿಸಿ ಹೈಕೋರ್ಟ್‌ಗೂ ಮೊರೆ ಹೋಗಲಾಯಿತು.

ಈ ಹಂತದಲ್ಲೇ ಹೆಸರಘಟ್ಟವನ್ನು ಕೇವಲ ಸರ್ಕಾರಿ ಭೂಮಿ ಅಥವಾ ಅಭಿವೃದ್ಧಿಗೆ ಲಭ್ಯವಿರುವ ಪ್ರದೇಶವೆಂದು ನೋಡುವ ಬದಲು, ವಿಶಿಷ್ಟ ಪರಿಸರ ವ್ಯವಸ್ಥೆಯಾಗಿ ಪರಿಗಣಿಸಬೇಕು ಎಂಬ ವಾದ ಬಲಗೊಂಡಿತು.

2012ರಲ್ಲೇ ಹೆಸರಘಟ್ಟದ ಸಂಪೂರ್ಣ catchment ಪ್ರದೇಶವನ್ನು ಸಂರಕ್ಷಿಸುವ ಅಗತ್ಯವನ್ನು ಪರಿಸರ ತಜ್ಞರು ಮುಂದಿಟ್ಟರು. ನಂತರ ರಾಮಚಂದ್ರ ಶ್ರೀನಿವಾಸನ್, ಜೀವಶಾಸ್ತ್ರಜ್ಞ ಕೆ.ಎಸ್. ಶೇಷಾದ್ರಿ ಹಾಗೂ ಪಕ್ಷಿಶಾಸ್ತ್ರಜ್ಞ ಎಂ.ಬಿ. ಕೃಷ್ಣ ಸೇರಿದಂತೆ ತಜ್ಞರ ಸಹಕಾರದಲ್ಲಿ ಸಂರಕ್ಷಣಾ ಪ್ರಸ್ತಾವನೆ ರೂಪುಗೊಂಡಿತು.

5,010 ಎಕರೆ Conservation Reserve ಪ್ರಸ್ತಾವನೆ–2013–14ರ ಅವಧಿಯಲ್ಲಿ ಸುಮಾರು 5,010 ಎಕರೆ ಪ್ರದೇಶವನ್ನು Wildlife Protection Act, 1972ರ Section 36A ಅಡಿಯಲ್ಲಿ Greater Hesaraghatta Grassland Conservation Reserve ಎಂದು ಘೋಷಿಸುವ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಅರಣ್ಯ ಇಲಾಖೆಗೆ ಸಲ್ಲಿಸಲಾಯಿತು. ಈ ಪ್ರದೇಶವು ಬೆಂಗಳೂರಿನ ಕೊನೆಯ ಪ್ರಮುಖ ಹುಲ್ಲುಗಾವಲು ಪರಿಸರ ವ್ಯವಸ್ಥೆಗಳಲ್ಲಿ ಒಂದಾಗಿದ್ದು, ನೂರಾರು ಪಕ್ಷಿ ಹಾಗೂ ಇತರ ಜೀವಿಗಳ ಆವಾಸವಾಗಿದೆ ಎಂದು ತಜ್ಞರು ವಿವರಿಸಿದ್ದರು. 2021ರ ರಾಜ್ಯ ವನ್ಯಜೀವಿ ಮಂಡಳಿ ದಾಖಲೆಗಳಲ್ಲಿಯೂ ಹೆಸರಘಟ್ಟ ಹುಲ್ಲುಗಾವಲಿನಲ್ಲಿ ಸುಮಾರು 133 ಪಕ್ಷಿ ಪ್ರಭೇದಗಳು ಮತ್ತು ಅನೇಕ ಸಸ್ಯ–ಪ್ರಾಣಿ ಪ್ರಭೇದಗಳಿರುವುದನ್ನು ಉಲ್ಲೇಖಿಸಲಾಗಿದೆ.

ಆದರೆ ಪ್ರಸ್ತಾವನೆ ಹಲವು ವರ್ಷಗಳ ಕಾಲ ಕಡತದಲ್ಲೇ ಉಳಿಯಿತು. 2021ರಲ್ಲಿ ರಾಜ್ಯ ವನ್ಯಜೀವಿ ಮಂಡಳಿ ಪ್ರಸ್ತಾವನೆಯನ್ನು ತಿರಸ್ಕರಿಸಿತ್ತು. ಪರಿಸರವಾದಿಗಳ ಹೋರಾಟದ ಬಳಿಕ ಕರ್ನಾಟಕ ಹೈಕೋರ್ಟ್ 2022ರಲ್ಲಿ ಆ ನಿರ್ಧಾರವನ್ನು ಪ್ರಶ್ನಿಸಿ, ವಿಷಯವನ್ನು ರಾಜ್ಯ ವನ್ಯಜೀವಿ ಮಂಡಳಿಗೆ ಮರುಪರಿಶೀಲನೆಗೆ ಕಳುಹಿಸಿತು.

2024ರಲ್ಲಿ ನಿರ್ಣಾಯಕ ಬೆಳವಣಿಗೆ–ದೀರ್ಘಕಾಲದ ಅನಿಶ್ಚಿತತೆಗೆ 2024ರಲ್ಲಿ ತೆರೆ ಬೀಳುವ ಸೂಚನೆ ದೊರೆಯಿತು. 2024ರ ಅಕ್ಟೋಬರ್ 7ರಂದು ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಅಧ್ಯಕ್ಷತೆಯ ರಾಜ್ಯ ವನ್ಯಜೀವಿ ಮಂಡಳಿ 5,010 ಎಕರೆ ಪ್ರದೇಶವನ್ನು Conservation Reserve ಮಾಡುವ ಪ್ರಸ್ತಾವನೆಗೆ ಅನುಮೋದನೆ ನೀಡಿತು. ಇದಾದ ಬಳಿಕ 2025ರ ಜನವರಿಯಲ್ಲಿ ರಾಜ್ಯ ಸಚಿವ ಸಂಪುಟವೂ ಅನುಮೋದನೆ ನೀಡಿತು. ಅಂತಿಮವಾಗಿ ಫೆಬ್ರವರಿ 24, 2025ರಂದು ಕರ್ನಾಟಕ ಸರ್ಕಾರ ಅಧಿಸೂಚನೆ ಹೊರಡಿಸಿ 5,678 ಎಕರೆ 32 ಗುಂಟೆ, ಅಂದರೆ ಸುಮಾರು 2,298.18 ಹೆಕ್ಟೇರ್ ಪ್ರದೇಶವನ್ನು Greater Hesaraghatta Grassland Conservation Reserve ಎಂದು ಘೋಷಿಸಿತು.

ಅಂದರೆ, ಆರಂಭದಲ್ಲಿ 5,010 ಎಕರೆ ಎಂದು ಪ್ರಸ್ತಾಪಿಸಲಾಗಿದ್ದ ಪ್ರದೇಶ ಅಂತಿಮ ಅಧಿಸೂಚನೆಯಲ್ಲಿ 5,678 ಎಕರೆಗೂ ವಿಸ್ತರಿಸಿದೆ.

1895ರಿಂದ ಬೆಂಗಳೂರಿನ ನೀರಿನ ಜೀವನಾಡಿಯಾಗಿದ್ದ ಹೆಸರಘಟ್ಟ ಕೆರೆಯು ಅರ್ಕಾವತಿ ನದಿಗೆ ಅಡ್ಡಲಾಗಿ 1895ರಲ್ಲಿ ಹೆಸರಘಟ್ಟ ಜಲಾಶಯವಾಗಿ ನಿರ್ಮಿಸಲಾಯಿತು. ಸುಮಾರು 1,500 ಎಕರೆ ವಿಸ್ತೀರ್ಣದ ಈ ಜಲಾಶಯ ಒಂದು ಶತಮಾನಕ್ಕೂ ಹೆಚ್ಚು ಕಾಲ ಬೆಂಗಳೂರಿನ ಕುಡಿಯುವ ನೀರಿನ ಪ್ರಮುಖ ಮೂಲವಾಗಿತ್ತು. ನೀರು ಪೂರೈಸುವುದರ ಜೊತೆಗೆ ನಗರವಾಸಿಗಳ ಪ್ರವಾಸ, ದೋಣಿ ವಿಹಾರ ಮತ್ತು ಮನರಂಜನೆಯ ತಾಣವಾಗಿಯೂ ಹೆಸರಘಟ್ಟ ಪ್ರಸಿದ್ಧವಾಗಿತ್ತು.

ಹೆಸರಘಟ್ಟ ಜಲಾಶಯಕ್ಕೆ ನೀರು ಹರಿದುಬರುವ ಸಂಪೂರ್ಣ ಛಿಚಿಣಛಿ–ಟಜಟಣ ಪ್ರದೇಶವು 5,000 ಎಕರೆಗೂ ಹೆಚ್ಚು ವಿಸ್ತಾರ ಹೊಂದಿದೆ. ಈ ಪ್ರದೇಶದ ಬಹುಭಾಗ ಸರ್ಕಾರಿ ಭೂಮಿಯಾಗಿದ್ದು, ಬೆಂಗಳೂರಿನ ಉಳಿದಿರುವ ಪ್ರಮುಖ ನೈಸರ್ಗಿಕ ಹುಲ್ಲುಗಾವಲುಗಳಲ್ಲಿ ಒಂದಾಗಿದೆ. ಸುಮಾರು 345 ಎಕರೆ ಹುಲ್ಲುಗಾವಲು ಪ್ರದೇಶವು ವಿಶೇಷ ಪರಿಸರ ಮಹತ್ವ ಹೊಂದಿದೆ ಎಂದು ಸಂರಕ್ಷಣಾವಾದಿಗಳು ಹಲವು ವರ್ಷಗಳಿಂದ ಪ್ರತಿಪಾದಿಸುತ್ತಿದ್ದಾರೆ.

ದೀರ್ಘಕಾಲ ಒಣಗಿದ್ದ ಹೆಸರಘಟ್ಟವು 2022ರಲ್ಲಿ ಭಾರಿ ಮಳೆಯಿಂದ ಸುಮಾರು 23 ವರ್ಷಗಳ ನಂತರ ಮತ್ತೆ ತುಂಬಿತ್ತು ಎಂದು ದಾಖಲಾಗಿದೆ.

ಸೆಪ್ಟೆಂಬರ್ 2026ರ ಹೊತ್ತಿಗೆ ಹೆಸರಘಟ್ಟದ ಅತ್ಯಂತ ಪ್ರಮುಖ ಪ್ರಗತಿ ಎಂದರೆ ಕೆರೆ ಸುತ್ತಲಿನ 5,678 ಎಕರೆಗೂ ಅಧಿಕ ಪ್ರದೇಶಕ್ಕೆ Greater Hesaraghatta Grassland Conservation Reserve ಎಂಬ ಅಧಿಕೃತ ಸಂರಕ್ಷಣಾ ಸ್ಥಾನಮಾನ ದೊರೆತಿರುವುದು. ಆದರೆ ಇದನ್ನು "ಹೆಸರಘಟ್ಟ ಕೆರೆ ಪುನರುಜ್ಜೀವನಗೊಂಡಿದೆ" ಎಂದು ಅರ್ಥೈಸಬಾರದು. ಕೆರೆಯ ನೀರಿನ ಸಂಗ್ರಹ ಸಾಮರ್ಥ್ಯ ಮತ್ತು ಅರ್ಕಾವತಿ catchment ಪುನಶ್ಚೇತನವೇ ಮುಂದಿನ ದೊಡ್ಡ ಸವಾಲು.

ಮುಂದಿನ ಪರೀಕ್ಷೆ ಸರ್ಕಾರದ ಅಧಿಸೂಚನೆಯಲ್ಲ ಅದರ ಪರಿಣಾಮಕಾರಿ ಅನುಷ್ಠಾನದಲ್ಲಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ದೃಢಸಂಕಲ್ಪ ಮತ್ತು ಪರಿಸರವಾದಿಗಳ ಮತ್ತು ಬೆಂಗಳೂರು ಮೂಲ ನಿವಾಸಿಗಳ ಕನಸು ನನಸಾಗುವುದೇ ಎಂದು ಕಾದು ನೋಡಬೇಕಿದೆ.

# ಶಿಕ್ಷಕರೋ–ವಿದ್ಯಾರ್ಥಿಯೋ–ಯಾರಿಗೆ ಕಾನೂನು?

## ವಿದ್ಯಾರ್ಥಿಗಳ ಜಗಳ ಬಿಡಿಸುವ ವೇಳೆ ಬೆತ್ತ ಬಳಸಿ ಜೈಲು ಸೇರಿದ್ದ ಶಿಕ್ಷಕನ ಮನದಾಳದ ಮಾತು




**ವಿ**ದ್ಯಾರ್ಥಿಗಳ ಜಗಳವನ್ನು ತಡೆಯುವ ವೇಳೆ ಬೆತ್ತ ಬಳಸಿದ್ದ ಕಾರಣ ಎರಡು ದಿನ ಪೊಲೀಸ್ ಠಾಣೆಯ ವರಾಂಡದಲ್ಲಿ ಕಳೆಯಬೇಕಾಗಿ ಬಂದಿದ್ದು, ನಂತರ 15,000 ಪರಿಹಾರವನ್ನೂ ನೀಡಬೇಕಾದ ವಯನಾಡಿನ ವಿಜಯ ಹೈಯರ್ ಸೆಕೆಂಡರಿ ಶಾಲೆಯ ಒಬ್ಬ ಶಿಕ್ಷಕರ ಮನದಾಳದ ಬರಹ.

ಇಷ್ಟು ವರ್ಷ ಶಿಕ್ಷಕನಾಗಿ ಕೆಲಸ ಮಾಡಿದರೂ ಸಿಗದ ಅರಿವು ಈ ಎರಡು ದಿನಗಳಲ್ಲಿ ಸಿಕ್ಕಿತು. ಅದಕ್ಕಾಗಿ ವಿದ್ಯಾರ್ಥಿಗಳಿಗೂ, ಪೋಷಕರಿಗೂ, ರಾಜಕೀಯ ನಾಯಕರಿಗೂ ಧನ್ಯವಾದಗಳು. ಇಂದಿನ ಕಾಲದಲ್ಲಿ ಶಿಕ್ಷಕನಿಗೆ ಅಧಿಕಾರವೂ ಇಲ್ಲ, ಹಕ್ಕೂ ಇಲ್ಲ; ಹೊಣೆಗಾರಿಕೆ ಮಾತ್ರ ಇದೆ ಎಂಬುದು ನನಗೆ ತಿಳಿಯಿತು.

ಇನ್ನು ಮುಂದೆ ವಿದ್ಯಾರ್ಥಿಗಳು ಪರಸ್ಪರ ಹೊಡೆದಾಡಿದರೂ, ತಪ್ಪು ದಾರಿಯಲ್ಲಿ ನಡೆದರೂ, ಓದಿದರೂ ಓದದಿದ್ದರೂ, ನಕಲು ಮಾಡಿದರೂ, ಶಾಲೆಯ ಆಸ್ತಿಯನ್ನು ಹಾಳು ಮಾಡಿದರೂ, ಮಾದಕ ವಸ್ತು ಸೇವಿಸಿದರೂ, ಏನೇ ಮಾಡಿದರೂ ಕಣ್ಣು–ಕಿವಿ ಮುಚ್ಚಿಕೊಂಡು ಸಂಬಳ ಪಡೆದು ಮನೆಗೆ ಹೋದರೆ ಸಾಕು ಎಂಬ ಪಾಠ ಈ ಸಮಾಜವೇ ಕಲಿಸಿತು. ನಾನು ಕೊಟ್ಟ ಸಣ್ಣ ಶಿಕ್ಷೆಯನ್ನು ಪ್ರತಿಯೊಬ್ಬರೂ ಗಂಟೆಗೊಮ್ಮೆ ದೊಡ್ಡದಾಗಿ ಹೇಳುತ್ತಾ, ಅದನ್ನು ಭೀಕರ ಘಟನೆ ಎಂಬಂತೆ ಚಿತ್ರಿಸುವುದನ್ನೂ ನೋಡಿದೆ. ಇನ್ನು ಮುಂದೆ ಹೊಣೆಗಾರಿಕೆಯ ಒತ್ತಡವಿಲ್ಲದೆ, ಪಾಠ ಮುಗಿಸಿ ಮನೆಗೆ ಹೋಗುವ ಶಿಕ್ಷಕನಾಗಿರುವುದೇ ಉತ್ತಮವೆಂದು ಭಾವಿಸುತಿದ್ದೇನೆ

ಆದ್ದರಿಂದ, ಇನ್ನು ಮುಂದೆ ನಾನು ಯಾರನ್ನೂ ತಿದ್ದಲು ಹೋಗುವುದಿಲ್ಲ ಎಂದು ಸಮಾಜಕ್ಕೂ, ನನ್ನ ಪ್ರಿಯ ವಿದ್ಯಾರ್ಥಿಗಳಿಗೂ ಘೋಷಿಸುತ್ತೇನೆ. ಅದರಿಂದ ಒಂದು ರೀತಿಯ ನೆಮ್ಮದಿ ಸಿಕ್ಕಿದೆ. ಶಾಲೆಯ ಮಕ್ಕಳನ್ನು ತಮ್ಮ ಮಕ್ಕಳಂತೆ ಭಾವಿಸಿ, ಅವರನ್ನು ಒಳ್ಳೆಯ ದಾರಿಗೆ ನಡೆಸಲು ಪ್ರಯತ್ನಿಸಿದ ಒಬ್ಬ ಪ್ರಾಮಾಣಿಕ ಪ್ರಾಂಶುಪಾಲರನ್ನು ಬಲಿಕೊಟ್ಟ ವಿದ್ಯಾರ್ಥಿಗಳಿಗೂ, ಪೋಷಕರಿಗೂ ನಾವು ಶಿಕ್ಷಕರು ತಪ್ಪು ಮಾಡಿದ್ದೇವೆ. ನಿಮ್ಮನ್ನು ನಮ್ಮ ಮಕ್ಕಳಂತೆ ಕಂಡದ್ದು ತಪ್ಪು, ನಿಮ್ಮನ್ನು ತಿದ್ದಲು ಪ್ರಯತ್ನಿಸಿದ್ದು ಇನ್ನೂ ದೊಡ್ಡ ತಪ್ಪು. ಗಂಡು–ಹೆಣ್ಣು ಮಕ್ಕಳು ತರಗತಿಯಲ್ಲಿ ಮದ್ಯಪಾನ ಮಾಡುವುದು, ಕೆಟ್ಟ ಸ್ನೇಹಗಳತ್ತ ಹೋಗುವುದು ಸರಿಯಲ್ಲ ಎಂದು ತಿಳಿಸಿ, ಅವರನ್ನು ಸರಿಪಡಿಸಲು ಕ್ರಮ ಕೈಗೊಂಡದ್ದು ಮಕ್ಕಳ ಹಕ್ಕು ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಎಂದು ನಾವು ಅರ್ಥ ಮಾಡಿಕೊಳ್ಳಲಿಲ್ಲ, ಅದಕ್ಕಾಗಿ ಕ್ಷಮಿಸಿ, ಮಕ್ಕಳೇ... ಕ್ಷಮಿಸಿ. ಒಂದು ವಿಷಯ ನೆನಪಿಟ್ಟುಕೊಳ್ಳಿ; ನಿಮ್ಮ ಏಳು ತಲೆಮಾರುಗಳ ಒಳಿತಿಗಾಗಿ ದೇವರನ್ನು ಪ್ರಾರ್ಥಿಸಿ, ದೇವರು ನಿಮ್ಮನ್ನು ಕ್ಷಮಿಸಲಿ. ಕೊನೆಯದಾಗಿ ನಾನು ಹೇಳುವುದೇನೆಂದರೆ ಈ ಸಂದೇಶವನ್ನು ಒಳ್ಳೆಯ ಪೋಷಕರಿಗೆ ತಲುಪಿಸಿ. ಕನಿಷ್ಠ ಅವರಲ್ಲಾದರೂ ಧರ್ಮಬುದ್ಧಿ ಉಳಿಯಲಿ. ಇಂತಹ ವಿವೇಕವಿಲ್ಲದ ಕಾನೂನುಗಳನ್ನೇ ಮೊದಲು ಬದಲಾಯಿಸಬೇಕಾದ ಅನಿವಾರ್ಯತೆ ಇದೆ. ಈ ಬರಹವನ್ನು ಸಾಮಾನ್ಯ ಪೋಸ್ಟ್ ಎಂದು ನಿರ್ಲಕ್ಷಿಸಬೇಡಿ. ಸ್ವಲ್ಪ ಸಮಯ ತೆಗೆದುಕೊಂಡು ಓದಿ, ಯೋಚಿಸಿ. ಇದು ಒಬ್ಬ ಶಿಕ್ಷಕರ ಮನಸ್ಸಿನ ನೋವಿನಿಂದ ಹೊರಬಂದ ಕಳಕಳಿಯ ಮಾತು...

ನಮ್ಮಲ್ಲಿ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಬಾರಿ ಜಪಾನ್ ದೇಶದಲ್ಲಿ ಮಕ್ಕಳಿಗೆ ಪ್ರಾಥಮಿಕ ವಿದ್ಯಾಭ್ಯಾಸ ಕಲಿಸುವ ವಿಧಾನದ ವಿಡಿಯೋಗಳನ್ನು ನೋಡಿದ್ದೇವೆ. ಜಪಾನ್ ದೇಶದಲ್ಲಿ ಮಕ್ಕಳಿಗೆ ಪ್ರಾಥಮಿಕ ವಿದ್ಯಾಭ್ಯಾಸದ ಹಂತದಲ್ಲಿಯೇ ಸ್ವಯಂಶಿಸ್ತು ಕಲಿಸಲಾಗುತ್ತದೆ. ಶಾಲೆಯ ಶೌಚಾಲಯವನ್ನು ಮಕ್ಕಳೇ ಶುಚಿಗೊಳಿಸಬೇಕಾಗುತ್ತದೆ. ಶಾಲೆಯ ಆವರಣವನ್ನು ಮಕ್ಕಳೇ ಗುಡಿಸಿ ಸ್ವಚ್ಛವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಶಾಲೆಯ ಸುತ್ತಮುತ್ತಲು ಗಿಡಗಳ ಸಂರಕ್ಷಣೆಯನ್ನು ಮಕ್ಕಳ ಕೈಯಲ್ಲಿಯೇ ಮಾಡಿಸಲಾಗುತ್ತದೆ. ಇದರಿಂದ ಮಕ್ಕಳಲ್ಲಿ ಚಿಕ್ಕವಯಸ್ಸಿನಲ್ಲಿಯೇ ಸ್ವಯಂ ನೈತಿಕತೆ ಹಾಗೂ ಪರಿಸರ ಸಂರಕ್ಷಣೆ ಬಗ್ಗೆ ಅರಿವು ಮತ್ತು ಸ್ವಚ್ಛತೆಯ ಪಾಠ ಮೈಗೂಡಿಸಿಕೊಂಡಂತಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಯಾವುದಾದರೂ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ಶಾಲಾ ಆವರಣವನ್ನು ಸ್ವಚ್ಛಗೊಳಿಸಿದ್ದನ್ನು ಕಂಡರೆ ಕೂಡಲೇ ಅದನ್ನು ವಿಡಿಯೋ ಮಾಡಿ ಜಾತಿ ಹಾಗೂ ಬಣ್ಣದ ರೂಪ ನೀಡಿ ಶಾಲೆಯ ಮುಖ್ಯೋಪಾಧ್ಯಾಯನನ್ನು ಸಸ್ಪೆಂಡ್ ಮಾಡಲಾಗುತ್ತದೆ. ನಮ್ಮ ದೇಶದ ವಿದ್ಯಾಭ್ಯಾಸ ಕ್ರಮ ಎಂದಿಗೂ ಸರಿ ಹೋಗುವುದಿಲ್ಲ ಬಿಡಿ. ಬಸ್ಸುಗಳಲ್ಲಿ ಹಿರಿಯ ನಾಗರಿಕರು ಹತ್ತಿದಾಗ ಅವರಿಗೆ ಮೀಸಲಿಟ್ಟ ಆಸನಗಳನ್ನು ಬಿಟ್ಟುಕೊಡಬೇಕು ಎನ್ನುವ ಕನಿಷ್ಠ ಸಂಸ್ಕಾರವನ್ನು ನಮ್ಮ ವಿದ್ಯಾಭ್ಯಾಸ ಕೊಡುತ್ತಿಲ್ಲ. ಇದು ನಮ್ಮ ದೇಶದ ಶೈಕ್ಷಣಿಕ ದುರಂತ.

# ‘ಆರೋಗ್ಯ ರಕ್ಷಣೆ’ಗೆ ಆಂದೋಲನದ ಸ್ಪರ್ಶ–ಐಎಎಸ್ ಅಧಿಕಾರಿ ತುಕಾರಾಮ್ ಮುಂಢೆರವರ ದಿಟ್ಟ ಹೆಜ್ಜೆ

**ಭಾ**ರತದಲ್ಲಿ, ಹೋಟೆಲ್, ರೆಸ್ಟೋರೆಂಟ್ ಮುಂತಾದೆಡೆ ಆಹಾರದ ಸುರಕ್ಷತೆ ಖಾತರಿಪಡಿಸುವುದು, ಔಷಧಗಳು ನಿಗದಿತ ಗುಣಮಟ್ಟ ಹೊಂದಿರುವಂತೆ ನೋಡಿಕೊಳ್ಳಬೇಕಾದದ್ದು ಎಫ್‌ಡಿಎ ಜವಾಬ್ದಾರಿ. ಆದರೆ ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರವು ಭಾರತ ದೇಶದಲ್ಲಿ ಇಂತಹ ಸೂಕ್ಷ್ಮ ವಿಚಾರಕ್ಕೆ ತಲೆ ಕೆಡಿಸಿಕೊಂಡ ಸಚಿವರು, ಅಧಿಕಾರಿಗಳು ಎಷ್ಟು ಜನ ಇದ್ದಾರೆ. ಆದರೆ ಈ ವಿಷಯಗಳಲ್ಲಿ ತುಕಾರಾಮ್ ಮುಂಡೆ ಅವರು ಎಫ್‌ಡಿಎ ಆಯುಕ್ತರಾಗಿ ಬಂದ ಮೇಲೆ ಆ ಕೆಲಸ ಆರಂಭಿಸಿದರು. ಸ್ಟಾರ್ ಹೋಟೆಲ್‌ಗಳು ಸೇರಿದಂತೆ ಬೀದಿ ಬದಿ ಆಹಾರ ಮಾರುವವರು. ರೆಸ್ಟೋರೆಂಟ್‌ಗಳು, ಡಾಬಾಗಳ ಮೇಲೆ ದಾಳಿ ಮಾಡಿ, ಗ್ರಾಹಕರಿಗೆ ಅಸುರಕ್ಷಿತ ಆಹಾರ ಪೂರೈಸುತ್ತಿದ್ದವರ ಮೇಲೆ ಕ್ರಮ ಜರುಗಿಸುವ ಆಂದೋಲನವನ್ನೇ ಆರಂಭಿಸಿದರು. ಪ್ಯಾಕೇಜಿಂಗ್ ಮಾಡಲಾದ ಆಹಾರ ಪದಾರ್ಥಗಳನ್ನು ಮಾರುವ ಮಳಿಗೆಗಳ ಮೇಲೆ ದಾಳಿ ಮಾಡಿ, ಪ್ಯಾಕೇಜ್ ಪದಾರ್ಥಗಳಲ್ಲಿ ಹಲವು ನ್ಯೂನತೆಗಳನ್ನು ಪತ್ತೆ ಹಚ್ಚಿದರು. ಅವರು ಎಫ್‌ಡಿಎ ಆಯುಕ್ತರಾಗಿ ಇದೇ ಸೆಪ್ಟೆಂಬರ್ 2ಕ್ಕೆ 100 ದಿನ ಪೂರೈಸಿದ್ದಾರೆ. ಈ ಅವಧಿಯಲ್ಲಿ ಅವರು 3,000ಕ್ಕೂ ಅಧಿಕ ದಾಳಿಗಳನ್ನು ನಡೆಸಿದ್ದಾರೆ. ನಿಯಮ ಮೀರಿ ಜಾಹೀರಾತಿನಲ್ಲಿ ಕಾಣಿಸಿಕೊಂಡ ಬಾಲಿವುಡ್‌ನ ಚಿತ್ರತಾರೆಯರಿಗೂ ಬಿಸಿ ಮುಟ್ಟಿಸಿದ್ದಾರೆ.



ಮುಂಢೆ ಅವರ ಈ ರೀತಿಯ ಕಾರ್ಯಶೈಲಿ ಹೊಸದೇನಲ್ಲ. ಐಎಎಸ್ ಅಧಿಕಾರಿಯಾಗಿ ಮೊದಲ ಹುದ್ದೆ ವಹಿಸಿಕೊಂಡ ದಿನದಿಂದಲೂ ಅವರು ಇದೇ ರೀತಿ ಇದ್ದಾರೆ. ಸೋಲಾಪುರದ ಬಾರ್ಶಿ ನಗರಪಾಲಿಕೆಯ ತರಬೇತಿ ನಿರತ ಮುಖ್ಯಕಾರ್ಯನಿರ್ವಹಣಾ ಅಧಿಕಾರಿಯಾಗಿದ್ದಾಗಲೇ, ಅಕ್ರಮ ಕಟ್ಟಡಗಳ ಧ್ವಂಸ ಕಾರ್ಯಾಚರಣೆ ಆರಂಭಿಸಿದ್ದರು. ನಾಂದೇಡ್‌ನ ಡೆನ್ನೂರ್ ಉಪವಿಭಾಗದಲ್ಲಿ ಅಕ್ರಮ ಮರಳು ಸಾಗಣೆಯ ವಿರುದ್ಧ ಮಧ್ಯರಾತ್ರಿ ಕಾರ್ಯಾಚರಣೆಗಳನ್ನು ನಡೆಸಿದ್ದರು. ಸ್ಥಳೀಯ ರಾಜಕಾರಣಿಗಳ ಅವಕೃಪೆಗೆ ಗುರಿಯಾಗಿ ಅಲ್ಲಿಂದ ವರ್ಗಾವಣೆಗೊಂಡಾಗ, ಪೊಲೀಸ್ ರಕ್ಷಣೆಯಲ್ಲಿ ಅವರು ತೆರಳಬೇಕಾಯಿತು. ಆದರೆ, ಸಾಮಾನ್ಯ ಜನರಿಗೆ ಅವರ ಬಗ್ಗೆ ಅಪಾರ ಪ್ರೀತಿ. ನಾಗ್‌ಪುರದ ಮಹಾನಗರಪಾಲಿಕೆಯ ಆಯುಕ್ತರಾಗಿ ಕೋವಿಡ್ ಅವಧಿಯಲ್ಲಿ ಉತ್ತಮ ಕೆಲಸ ಮಾಡಿದ್ದ ಅವರನ್ನು ಸರ್ಕಾರ ಅಲ್ಲಿಂದ ವರ್ಗಾವಣೆ ಮಾಡಿದಾಗ, ಅಲ್ಲಿಂದ ತೆರಳಲು ಬಿಡದಂತೆ ಜನ ಅವರನ್ನು ಸುತ್ತುವರಿದಿದ್ದರು. ಅವರು ಜಲ್ನಾ ಜಿಲ್ಲಾಧಿಕಾರಿಯಾಗಿದ್ದ ಅವಧಿಯಲ್ಲಿ (2011–12) ಭೀಕರ ಬರ ಇತ್ತು. ರಾಜಕಾರಣಿಗಳು ಮತ್ತು ಟ್ಯಾಂಕರ್ ಮಾಫಿಯಾಕ್ಕೆ ಸಡ್ಡು ಹೊಡೆದು, ಜನರಿಗೆ ಕುಡಿಯಲು ನೀರು ಕೊಡಿಸಿ ‘ವಾಟರ್ ಮ್ಯಾನ್’ ಎನ್ನಿಸಿಕೊಂಡಿದ್ದರು.

ಐಎಎಸ್ ಅಧಿಕಾರಿ ತುಕಾರಾಮ್ ಅವರಿಗೆ ಇಂಥ ಧೈರ್ಯ ಬರಲು ಕಾರಣ ಅವರ ಬಾಲ್ಯದ ಕಡು ಬಡತನ ಕಾರಣ ಎನ್ನುವವರಿದ್ದಾರೆ. ಸದಾ ಬರದಿಂದ ಕೂಡಿರುವ ಬೀಡ್ ಜಿಲೆಯ ಟಾಡ್‌ಸೋನಾ ಗ್ರಾಮದ ಬಡ ರೈತನ ಮನೆಯಲ್ಲಿ ಹುಟ್ಟಿ ಸರ್ಕಾರಿ ಶಾಲೆಗಳಲ್ಲಿ ಓದಿದವರು; ಡಾ.ಬಾಬಾಸಾಹೇಬ್ ಅಂಬೇಡ್ಕರ್ ಕಾಲೇಜಿನಲ್ಲಿ ಪದವಿ ಪಡೆದ ನಂತರ ಯುಪಿಎಸ್ಸಿ ಪರೀಕ್ಷೆಯಲ್ಲಿ 20ನೇ ರ‍್ಯಾಂಕ್ ಗಳಿಸಿ ಐಎಎಸ್ ಅಧಿಕಾರಿಯಾದರು. ಜೀವನದಲ್ಲಿ ಅವರು ಅನುಭವಿಸಿದ ಬಡತನ, ಸುತ್ತಲಿನ ಜನರ ಕಷ್ಟದ ಜೀವನ ಅವರನ್ನು ಕಠೋರ ಅಧಿಕಾರಿಯನ್ನಾಗಿ ಮಾಡಿದವು ಎನ್ನುವವರಿದ್ದಾರೆ."

ರಾಜಕಾರಣಿಗಳಿಗೆ ತಲೆ ಬಾಗದಿರುವುದು, ಜನರೊಂದಿಗಿ ಸಂಪರ್ಕದಲ್ಲಿರುವುದು ಅವರ ಶೈಲಿ. ಅವರ ಕೆಲಸದ ಶೈಲಿಯ ಎಂದು ಟೀಕಿಸುವವರಿದ್ದಾರೆ. ನಿಯಮಗಳ ಉಲ್ಲಂಘನೆ ಎನ ಇದ್ದಾರೆ. ಆದರೆ, ಜನರಿಗೆ ತುಕಾರಾಮ್ ಅವರ ಆಶಯಗಳ ಅವರು ಏನೇ ಮಾಡಿದರೂ ಜನರ ಒಳಿತಿಗಾಗಿಯೇ ಮಾದ ವಿಶ್ವಾಸ ಮೂಡಿದೆ. ಮಹಾರಾಷ್ಟ್ರದಲ್ಲಿ ಅವರು ಪ್ರಸ್ತುತಿ ಆಗಿದ್ದಾರೆ. ಖ್ಯಾತ ನಟ ನಟಿಯರೂ ಅವರೊಂದಿಗೆ ಫೋಟೊ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ.

ಒಬ್ಬ ವ್ಯಕ್ತಿಯಿಂದ ವ್ಯವಸ್ಥೆಯನ್ನು ಸುಧಾರಿಸುವುದು ‘ಸಾಧ್ಯವಿಲ್ಲ. ಅಂಥವರು ಮಾಡುವ ಸಣ್ಣ ತಪ್ಪು ಹಿಡಿದು ಅವರನ್ನು ಮೂಲೆಗುಂಪಾಗಿಸುವ ವ್ಯವಸ್ಥಿತ ಕಾರ್ಯತಂತ್ರಗಳು ಸದಾ ಚಾಲ್ತಿಯಲ್ಲಿರುತ್ತವೆ. ತುಕಾರಾಮ್ ಮುಂಡೆ ಅಂತಹ ಹಲವರನ್ನು ವ್ಯವಸ್ಥೆ ‘ಜೀರ್ಣಿಸಿ’ಕೊಂಡಿದೆ. ಅದೇನೇ ಇರಲಿ; ಒಬ್ಬ ಉನ್ನತ ಅಧಿಕಾರಿ ದಕ್ಷ ಮತ್ತು ಪ್ರಾಮಾಣಿಕ ಆಗಿದ್ದರೆ ವ್ಯವಸ್ಥೆಯಲ್ಲಿ ಏನು ಬದಲಾವಣೆ ಮಾಡಬಹುದು ಎನ್ನುವುದಕ್ಕೆ ಅವರು ನಿದರ್ಶನವಾಗಿದ್ದಾರೆ. ಅವ್ಯವಸ್ಥೆ, ಭ್ರಷ್ಟಾಚಾರ ಸಹಜ ಎನ್ನುವಂತಾಗಿರುವ ವ್ಯವಸ್ಥೆ ಯಲ್ಲಿ ಸಣ್ಣದೊಂದು ಭರವಸೆ ಮೂಡಿಸಿ, ಪರಿವರ್ತನೆಯ ಹಾದಿ ತೋರಿದ್ದಾರೆ. ತುಕಾರಾಮ್ ಮುಂಡೆ ಅವರು ಮಾಡುತ್ತಿರುವ ಕೆಲಸ ಜನರ ಮತ್ತು ಸಮಾಜದ ಆರೋಗ್ಯದ ದೃಷ್ಟಿಯಿಂದ ಸದ್ಯಕ್ಕಂತೂ ಅತ್ಯಂತ ಮುಖ್ಯವಾದುದು ಎನ್ನುವುದು ನಿಸ್ಸಂಶಯ.

# ಕೆಪಿಎಸ್‌ಸಿ ಕರ್ಮಕಾಂಡ ಇದು ಬೇಕಿತ್ತೇ?





ರಾಜ್ಯದ ಆಡಳಿತ ಯಂತ್ರವನ್ನು ಮುನ್ನಡೆಸಲು ಅತ್ಯಂತ ಯೋಗ್ಯ ಮತ್ತು ಅರ್ಹ ಅಧಿಕಾರಿಗಳನ್ನು ಆಯ್ಕೆ ಮಾಡುವ ಪವಿತ್ರ ಸಾಂವಿಧಾನಿಕ ಜವಾಬ್ದಾರಿ ಹೊತ್ತಿರುವುದು ಕರ್ನಾಟಕ ಲೋಕಸೇವಾ ಆಯೋಗ (KPSC). ಆದರೆ, ಕಳೆದ ಕೆಲವು ದಶಕಗಳಿಂದ ಕೆಪಿಎಸ್‌ಸಿ ಎನ್ನುವ ಹೆಸರು ಅರ್ಹ ಅಭ್ಯರ್ಥಿಗಳಲ್ಲಿ ಆಶಾಭಾವನೆ ಮೂಡಿಸುವ ಬದಲು, ಆತಂಕ ಮತ್ತು ನಿರಾಸೆಯನ್ನು ಹುಟ್ಟುಹಾಕುತ್ತಿದೆ. "ಕೆಪಿಎಸ್‌ಸಿ ಕರ್ಮಕಾಂಡ" ಎಂಬ ಮಾತು ಇತ್ತೀಚಿನ ದಿನಗಳಲ್ಲಿ ಕೇವಲ ರಾಜಕೀಯ ಆರೋಪ-ಪ್ರತ್ಯಾರೋಪವಾಗಿ ಉಳಿದಿಲ್ಲ; ಬದಲಿಗೆ ಲಕ್ಷಾಂತರ ಗ್ರಾಮೀಣ ಯುವಕರ ಪಾಲಿಗೆ ಶಾಪವಾಗಿ ಪರಿಣಮಿಸಿದೆ.

ಕೆಪಿಎಸ್‌ಸಿ ಇತಿಹಾಸವನ್ನು ತಿರುವಿ ಹಾಕಿದರೆ, ಪ್ರಥಮ ದರ್ಜೆ ಸಹಾಯಕರ (FDA) ಹುದ್ದೆಗಳಿಂದ ಹಿಡಿದು ಪ್ರತಿಷ್ಠಿತ ಕೆಎಎಸ್ (KAS) ಅಧಿಕಾರಿಗಳ ನೇಮಕಾತಿಯವರೆಗೆ ಬಹುತೇಕ ಎಲ್ಲ ಹಂತಗಳಲ್ಲೂ ಅಕ್ರಮದ ನೆರಳು ಬಿದ್ದಿದೆ. ಇತ್ತೀಚೆಗೆ ಬೆಳಕಿಗೆ ಬಂದ ಪಶುವೈದ್ಯಾಧಿಕಾರಿಗಳ ನೇಮಕಾತಿ ಹಗರಣವು ಈ ಭ್ರಷ್ಟಾಚಾರದ ಕಬಂಧ ಬಾಹುಗಳು ಎಷ್ಟು ಆಳವಾಗಿ ಬೇರೂರಿವೆ ಎಂಬುದಕ್ಕೆ ಜೀವಂತ ಸಾಕ್ಷಿಯಾಗಿದೆ.

ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೈಕೋರ್ಟ್ ಇತ್ತೀಚೆಗೆ ಸ್ಪಷ್ಟವಾಗಿ ತಿರಸ್ಕರಿಸಿದೆ. ಈ ಸಂದರ್ಭದಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ ನ್ಯಾಯಾಲಯ, "ಕೆಪಿಎಸ್‌ಸಿ ಮೇಲಿನ ಜನರ ವಿಶ್ವಾಸ ಸಂಪೂರ್ಣ ನಾಶವಾಗಿದೆ, ಅಭ್ಯರ್ಥಿಗಳು ಅಸಹಾಯಕರಾಗಿದ್ದಾರೆ" ಎಂದು ಕಟು ಶಬ್ದಗಳಲ್ಲಿ ತರಾಟೆಗೆ ತೆಗೆದುಕೊಂಡಿದೆ.

2011ರ ಕೆಎಎಸ್ ಅಧಿಕಾರಿಗಳ ನೇಮಕಾತಿ ಹಗರಣದಲ್ಲಿ ಇಡೀ ಆಯ್ಕೆ ಪಟ್ಟಿಯನ್ನೇ ಸರ್ಕಾರ ರದ್ದುಗೊಳಿಸಬೇಕಾಗಿ ಬಂದಿದ್ದು ರಾಜ್ಯದ ಇತಿಹಾಸದಲ್ಲೇ ಕಪ್ಪು ಚುಕ್ಕೆಯಾಗಿದೆ. ಸಿಐಡಿ (CID) ತನಿಖೆಯ ವರದಿಗಳು ಆಯೋಗದ ಒಳಗಿನ ಉನ್ನತ ಅಧಿಕಾರಿಗಳ ಶಾಮೀಲನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದವು.

ಇತ್ತೀಚಿನ ಪಶುವೈದ್ಯಾಧಿಕಾರಿಗಳ ನೇಮಕಾತಿ ಅಕ್ರಮದಲ್ಲಿ ಜಾರಿ ನಿರ್ದೇಶನಾಲಯ (ED) ಮತ್ತು ಸಿಐಡಿ ತನಿಖೆಗಳು ಚುರುಕುಗೊಂಡ ಬೆನ್ನಲ್ಲೇ, ಆಯೋಗದ ಉನ್ನತ ಹುದ್ದೆಯಲ್ಲಿದ್ದವರ ಮೇಲೆಯೇ ಕ್ರಮ ಜರುಗಿಸುವ ಪರಿಸ್ಥಿತಿ ಬಂದೊದಗಿತು. ಪ್ರತಿಪಕ್ಷಗಳು ಈ ಇಡೀ ಜಾಲವನ್ನು ಭೇದಿಸಲು ಸಿಬಿಐ (CBI) ತನಿಖೆಗೆ ಆಗ್ರಹಿಸುತ್ತಿರುವುದು, ವ್ಯವಸ್ಥೆಯ ಮೇಲಿರುವ ನಂಬಿಕೆ ಎಷ್ಟು ಕುಸಿದಿದೆ ಎಂಬುದನ್ನು ತೋರಿಸುತ್ತದೆ.

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿ ಅಕ್ರಮದ ತನಿಖೆ ನಡೆಸುತ್ತಿರುವ ಸಿಐಡಿ (CID) ಮತ್ತು ಜಾರಿ ನಿರ್ದೇಶನಾಲಯ (ED) ದಿನಕ್ಕೊಂದು ಸ್ಫೋಟಕ ಸತ್ಯಗಳನ್ನು ಹೊರಹಾಕುತ್ತಿದ್ದು, ಇಡೀ ಆಯೋಗದ ಭ್ರಷ್ಟ ಜಾಲದ ನಂಟು ಐಎಎಸ್ ಅಧಿಕಾರಿಗಳವರೆಗೆ ಮುಟ್ಟಿರುವುದು ಸಾಬೀತಾಗಿದೆ. ಪಶುವೈದ್ಯಾಧಿಕಾರಿ ನೇಮಕಾತಿ ಹಗರಣದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಬರೋಬ್ಬರಿ ರೂ 40 ಲಕ್ಷಕ್ಕೆ ಮಾರಾಟ ಮಾಡಲಾಗಿದೆ ಎಂಬ ಆಘಾತಕಾರಿ ಅಂಶವನ್ನು ಸಿಐಡಿ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿಗಳಾದ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಗಂಗ್ವಾರ್ ಮತ್ತು ಮುಖ್ಯ ಮಧ್ಯವರ್ತಿ ಬಸವರಾಜ್ ಕನ್ನಾಳೆ ಸದ್ಯ ಸಿಐಡಿ ಕಸ್ಟಡಿ ಮುಗಿಸಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ತನಿಖೆಯ ವೇಳೆ ಜ್ಞಾನೇಂದ್ರ ಕುಮಾರ್ ಅವರು ಲಂಚದ ಲೂಟಿ ಹಣದಿಂದ ತಮ್ಮ ಪ್ರೇಯಸಿಗೆ ರೂ. 26 ಲಕ್ಷ ಮೌಲ್ಯದ ಚಿನ್ನದ ಉಡುಗೊರೆ ನೀಡಿದ್ದರು ಎಂಬ ಸಂಗತಿ ಹೊರಬಿದ್ದಿದೆ. ಇನ್ನು ಆಯೋಗದ ಭದ್ರತಾ ಕೊಠಡಿಯಲ್ಲಿದ್ದ ಅಭ್ಯರ್ಥಿಗಳ ಓಎಂಆರ್ (OMR) ಪ್ರತಿಗಳನ್ನು ಸ್ವತಃ ಜ್ಞಾನೇಂದ್ರ ಅವರೇ ತಿದ್ದಿರುವುದು ತನಿಖೆಯಲ್ಲಿ ದೃಢಪಟ್ಟಿದೆ.

ತನಿಖಾ ಸಂಸ್ಥೆಗಳು ಬೆನ್ನಟ್ಟುತ್ತಿದ್ದಂತೆ ಮಧ್ಯವರ್ತಿ ಬಸವರಾಜ್ ಕನ್ನಾಳೆ ಸಾಕ್ಷ್ಯ ನಾಶಪಡಿಸಲು ಸಂಚು ರೂಪಿಸಿದ್ದ. ಅಕ್ರಮದ ಮಹತ್ವದ ಆಧಾರಗಳಿದ್ದ ಲ್ಯಾಪ್‌ಟಾಪ್ ಮತ್ತು ಮೊಬೈಲ್ ಫೋನ್‌ಗಳನ್ನು ಈತ ಕಾವೇರಿ ನದಿಗೆ ಎಸೆದಿರುವುದು ವಿಚಾರಣೆಯ ವೇಳೆ ಪತ್ತೆಯಾಗಿದೆ. ಈ ಬೆನ್ನಲ್ಲೇ ಕನ್ನಾಳೆಗೆ ಸೇರಿದ ಸುಮಾರು 17 ಬ್ಯಾಂಕ್ ಖಾತೆಗಳನ್ನು ಸಿಐಡಿ ಅಧಿಕಾರಿಗಳು ಫ್ರೀಜ್ ಮಾಡಿದ್ದಾರೆ.

ನೇಮಕಾತಿ ಅಕ್ರಮದ ನಂಟು ಕೇವಲ ಬೆಂಗಳೂರಿಗೆ ಸೀಮಿತವಾಗಿಲ್ಲ. ಕಲಬುರಗಿ ಸೇರಿದಂತೆ ರಾಜ್ಯದ 20ಕ್ಕೂ ಹೆಚ್ಚು ಸ್ಥಳಗಳಲ್ಲಿ ಇ.ಡಿ ಮತ್ತು ಸಿಐಡಿ ಅಧಿಕಾರಿಗಳು ಸಂಶಯಾಸ್ಪದ ಅಭ್ಯರ್ಥಿಗಳ ಮನೆಗಳ ಮೇಲೆ ಸರಣಿ ದಾಳಿ ಮುಂದುವರಿಸಿದ್ದಾರೆ. ಮತ್ತೊಂದೆಡೆ, ಆಯೋಗದ ನೂತನ ಪರೀಕ್ಷಾ ನಿಯಂತ್ರಕರಾಗಿ ಎಚ್. ಪ್ರಸನ್ನ ಅವರು ಅಧಿಕಾರ ಸ್ವೀಕರಿಸಿದ್ದು, ಮುಂದಿನ ದಿನಗಳಲ್ಲಿ ಯುಪಿಎಸ್‌ಸಿ (UPSC) ಮಾದರಿಯಲ್ಲಿ ಪಾರದರ್ಶಕ ಪರೀಕ್ಷೆ ನಡೆಸುವುದಾಗಿ ಭರವಸೆ ನೀಡಿದ್ದಾರೆ.

ಬೆಂಗಳೂರಿನ ವಿಜಯನಗರದಂತಹ ಕೋಚಿಂಗ್ ಹಬ್‌ಗಳಲ್ಲಿ, ಸಣ್ಣಪುಟ್ಟ ಕೊಠಡಿಗಳಲ್ಲಿ ವಾಸಿಸುತ್ತಾ, ದಿನಕ್ಕೆ 12ರಿಂದ 14 ಗಂಟೆಗಳ ಕಾಲ ಓದುವ ಲಕ್ಷಾಂತರ ಗ್ರಾಮೀಣ ಯುವಕರ ಪರಿಶ್ರಮಕ್ಕೆ ಈ ಭ್ರಷ್ಟಾಚಾರ ಬೆಲೆ ಇಲ್ಲದಂತೆ ಮಾಡಿದೆ. ತಮ್ಮ ತಂದೆ-ತಾಯಿ ಸಾಲಸೋಲ ಮಾಡಿ ಕಳುಹಿಸುವ ಹಣದಲ್ಲಿ ವರ್ಷಗಟ್ಟಲೆ ಕಷ್ಟಪಟ್ಟು ಓದಿದ ಪರೀಕ್ಷೆಗಳು ಸಣ್ಣದೊಂದು ಸೋರಿಕೆಯ ಕಾರಣಕ್ಕೆ ರದ್ದಾದಾಗ ಅಭ್ಯರ್ಥಿಗಳು ಅನುಭವಿಸುವ ಮಾನಸಿಕ ಯಾತನೆ ವರ್ಣನಾತೀತ. ಅನೇಕ ಅಭ್ಯರ್ಥಿಗಳು ವಯೋಮಿತಿ ಮೀರಿ, ಭವಿಷ್ಯದ ಭರವಸೆಯನ್ನೇ ಕಳೆದುಕೊಳ್ಳುತ್ತಿದ್ದಾರೆ.

# ಇರಾನ್ ಕದನ ವಿರಾಮ ಟ್ರಂಪ್ ತಿರಸ್ಕಾರ ಮತ್ತೆ ದಾಳಿ ಸಾಧ್ಯತೆ

ವಾಷಿಂಗ್ಟನ್/ನ್ಯೂಯಾರ್ಕ್: ಪಶ್ಚಿಮ ಏಷ್ಯಾದಲ್ಲಿ ಮುಂದುವರಿದಿರುವ ಅಮೆರಿಕ-ಇರಾನ್ ಸಂಘರ್ಷಕ್ಕೆ ತಾತ್ಕಾಲಿಕ ವಿರಾಮ ನೀಡುವ ಉದ್ದೇಶದಿಂದ ಇರಾನ್ ಮುಂದಿಟ್ಟಿದ್ದ ಏಳು ದಿನಗಳ ಕದನ ವಿರಾಮ ಯೋಜನೆಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ್ದಾರೆ.

ನವೆಂಬರ್‌ನಲ್ಲಿ ನಡೆಯಲಿರುವ ಅಮೆರಿಕದ ಮಧ್ಯಂತರ ಚುನಾವಣೆಗಳ ಬಳಿಕ ಇರಾನ್ ವಿರುದ್ಧದ ಅಮೆರಿಕದ ಬಾಂಬ್ ದಾಳಿಯನ್ನು ಮತ್ತೆ ಆರಂಭಿಸುವ ನಿರೀಕ್ಷೆ ಇದೆ ಎಂದು ಟ್ರಂಪ್ ತಮ್ಮ ಆಪ್ತರಿಗೆ ತಿಳಿಸಿದ್ದಾರೆ ಎಂದು ಅಮೆರಿಕದ ಅಧಿಕಾರಿಗಳನ್ನು ಉಲ್ಲೇಖಿಸಿ ವಾಲ್‌ಸ್ಟ್ರೀಟ್ ಜರ್ನಲ್ ವರದಿ ಹೇಳಿದೆ.

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ವಿಶ್ವಸಂಸ್ಥೆಯ ಸಭೆಯ ವೇಳೆ ಅಮೆರಿಕಕ್ಕೆ ಏಳು ದಿನಗಳ ಯೋಜನೆಯನ್ನು ಮಧ್ಯವರ್ತಿಗಳ ಮೂಲಕ ಸಲ್ಲಿಸಿರುವುದಾಗಿ ತಿಳಿಸಿದ್ದರು. ಅಮೆರಿಕ ತನ್ನ ಇರಾನ್ ಬಂದರುಗಳ ಮೇಲಿನ ನೌಕಾ ನಿರ್ಬಂಧವನ್ನು ತೆರವುಗೊಳಿಸಿ, ಇರಾನ್ ತೈಲ ರಫ್ತಿನ ಮೇಲಿನ ನಿರ್ಬಂಧಗಳನ್ನು ಸಡಿಲಿಸಿ ಹಾಗೂ



ಪ್ರದೇಶದಲ್ಲಿ ಕದನ ವಿರಾಮಕ್ಕೆ ಸಮ್ಮತಿಸಿದರೆ, ಏಳನೇ ದಿನ ಹೊರ್ಮುಜ್ ಜಲಸಂಧಿಯನ್ನು ಪುನಃ ತೆರೆಯುವುದಾಗಿ ಇರಾನ್ ಪ್ರಸ್ತಾವಿಸಿದೆ.

ಇರಾನ್‌ನ ಯೋಜನೆಯ ಪ್ರಕಾರ, ಅಮೆರಿಕ ಅಗತ್ಯ ಷರತ್ತುಗಳನ್ನು ಒಪ್ಪಿಕೊಂಡ ಬಳಿಕ ಕದನ ಸ್ಥಗಿತಗೊಳ್ಳಬೇಕು. ಇರಾನ್‌ನ ಬಂದರುಗಳ ಮೇಲಿನ ಅಮೆರಿಕದ ನೌಕಾ ನಿರ್ಬಂಧ ತೆರವಾಗಬೇಕು. ಇರಾನ್‌ನ ತೈಲ ಮಾರಾಟದ ಮೇಲಿನ ನಿರ್ಬಂಧಗಳನ್ನು ಸಡಿಲಿಸಬೇಕು. ಯುದ್ಧದಿಂದ ಸ್ಥಗಿತಗೊಂಡಿರುವ ರಾಜತಾಂತ್ರಿಕ ಸಂಪರ್ಕ ಮತ್ತೆ ಆರಂಭವಾಗಬೇಕು. ಏಳನೇ ದಿನ ಹೋರ್ಮುಜ್ ಜಲಸಂಧಿಯಲ್ಲಿ ಸಾಮಾನ್ಯ ನೌಕಾ ಸಂಚಾರ ಪುನರಾರಂಭ ವಾಗಬೇಕು. ಬಳಿಕ ಇರಾನ್‌ನ ಪರಮಾಣು ಕಾರ್ಯಕ್ರಮದ ಕುರಿತು ಅಮೆರಿಕ-ಇರಾನ್ ಮಾತುಕತೆ ಪುನರಾರಂಭಿಸುವುದು ಯೋಜನೆಯ ಪ್ರಮುಖ ಅಂಶವಾಗಿದೆ.

ಕೆಲವು ವರದಿಗಳ ಪ್ರಕಾರ, ಇರಾನ್ ತನ್ನ ಸ್ಥಗಿತಗೊಂಡಿರುವ ಆಸ್ತಿಗಳನ್ನು ಬಿಡುಗಡೆ ಮಾಡಬೇಕು ಎಂಬ ಬೇಡಿಕೆಯನ್ನೂ ಮುಂದಿಟ್ಟಿದೆ. ಈ ಮೊತ್ತವನ್ನು ಕನಿಷ್ಠ 12 ಬಿಲಿಯನ್ ಡಾಲರ್ ಎಂದು ವರದಿಯಾಗಿದೆ. ಯೆಮೆನ್ ಸೇರಿದಂತೆ ಪ್ರದೇಶದ ಇತರ ರಣರಂಗಗಳಲ್ಲಿಯೂ ಹೋರಾಟ ಸ್ಥಗಿತಗೊಳಿಸುವುದು ಇರಾನ್‌ನ ಬೇಡಿಕೆಗಳಲ್ಲಿ ಸೇರಿದೆ ಎಂದು ವರದಿಗಳು ತಿಳಿಸಿವೆ.

ಇರಾನ್‌ನ ಪ್ರಸ್ತಾವವನ್ನು ಟ್ರಂಪ್ ಒಪ್ಪಿಲ್ಲ. ವಾಲ್ ಸ್ಟ್ರೀಟ್ ಜರ್ನಲ್ ಪ್ರಕಾರ, ಇರಾನ್ ಮೇಲೆ ಮುಂದುವರಿದಿರುವ ಆರ್ಥಿಕ ಮತ್ತು ನೌಕಾ ಒತ್ತಡವನ್ನು ಕಡಿಮೆ ಮಾಡುವ ಯಾವುದೇ ತಕ್ಷಣದ ಕ್ರಮಕ್ಕೆ ಅಮೆರಿಕ ಸಿದ್ಧವಿಲ್ಲ. ಇರಾನ್ ತನ್ನ ಪರಮಾಣು ಕಾರ್ಯಕ್ರಮವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವಂತಹ ಅಮೆರಿಕದ ಬೇಡಿಕೆಗಳನ್ನು ಒಪ್ಪಿಕೊಳ್ಳುವ ಬಗ್ಗೆ ಟ್ರಂಪ್ ಅನುಮಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಟ್ರಂಪ್ ಅವರ ಈ ನಿಲುವು ಇತ್ತೀಚಿನ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಭಾಷಣದ ಹಿನ್ನೆಲೆಯಲ್ಲಿ ಬಂದಿದೆ. ಸೆಪ್ಟೆಂಬರ್ 22ರಂದು ಮಾತನಾಡಿದ್ದ ಟ್ರಂಪ್, ಇರಾನ್‌ನೊಂದಿಗೆ ಒಪ್ಪಂದ ಸಾಧ್ಯವಾಗದಿದ್ದರೆ ಕಠಿಣ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದ್ದರು. ನವೆಂಬರ್ ಮಧ್ಯಂತರ ಚುನಾವಣೆಗಳ ನಂತರ ಒಪ್ಪಂದದ ಸಾಧ್ಯತೆಯನ್ನೂ ಅವರು ಪ್ರಸ್ತಾಪಿಸಿದ್ದರು.

ಅಮೆರಿಕ ಮತ್ತು ಇರಾನ್ ನಡುವೆ ನೇರ ಮಾತುಕತೆ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಕತಾರ್ ಮಧ್ಯವರ್ತಿಯಾಗಿ ಸಂದೇಶಗಳ ವಿನಿಮಯಕ್ಕೆ ನೆರವಾಗುತ್ತಿದೆ. ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಸಂದರ್ಭದಲ್ಲಿಯೂ ಎರಡೂ ದೇಶಗಳ ನಡುವೆ ಪರೋಕ್ಷ ಸಂಪರ್ಕ ಮುಂದುವರಿದಿತ್ತು. ಆದರೆ ಮಾತುಕತೆಯಲ್ಲಿ ಮಹತ್ವದ ರಾಜತಾಂತ್ರಿಕ ಒಪ್ಪಂದ ಇನ್ನೂ ಸಾಧ್ಯವಾಗಿಲ್ಲ ಎಂದು ವರದಿಗಳು ತಿಳಿಸಿವೆ.

ಇರಾನ್ ಮತ್ತು ಒಮಾನ್ ನಡುವೆ ಇರುವ ಹೋರ್ಮುಜ್ ಜಲಸಂಧಿ ಜಾಗತಿಕ ತೈಲ ಮತ್ತು ಅನಿಲ ಸಾಗಣೆಯ ಪ್ರಮುಖ ಸಮುದ್ರ ಮಾರ್ಗವಾಗಿದೆ. ಈ ಮಾರ್ಗದಲ್ಲಿ ನೌಕಾ ಸಂಚಾರಕ್ಕೆ ಅಡ್ಡಿ ಉಂಟಾದರೆ ಜಾಗತಿಕ ಇಂಧನ ಪೂರೈಕೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಸಂಘರ್ಷದಿಂದ ಈಗಾಗಲೇ ತೈಲ ಸಾಗಣೆ ಮತ್ತು ಇಂಧನ ಬೆಲೆಗಳ ಬಗ್ಗೆ ಜಾಗತಿಕ ಆತಂಕ ಹೆಚ್ಚಾಗಿದೆ.

# ಬಗೆಹರಿಯದ ಎಸ್‌ಐಆರ್ ಮತದಾರರ ಗುರುತು



ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ: ನಿಮ್ಮ ವೋಟರ್ ಐಡಿ ಸಮಸ್ಯೆಗೆ ಇಲ್ಲಿದೆ ಸರಳ ಪರಿಹಾರ! ರಾಜ್ಯದಲ್ಲಿ ಪ್ರಸ್ತುತ ನಡೆಯುತ್ತಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (SIR) ಪ್ರಕ್ರಿಯೆಯು ಸಾರ್ವಜನಿಕರಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಕೈಯಲ್ಲಿ ಅಧಿಕೃತ ಮತದಾರರ ಗುರುತಿನ ಚೀಟಿ (Voter ID) ಇದ್ದರೂ, ಮತದಾರರ ಪಟ್ಟಿಯಲ್ಲಿ ಹೆಸರು ಕಾಣೆಯಾಗಿರುವುದು ಅಥವಾ ಚುನಾವಣಾ ಕಚೇರಿಯಿಂದ ನೋಟಿಸ್ ಬರುತ್ತಿರುವುದು ನಾಗರಿಕರಲ್ಲಿ ಗೊಂದಲ ಮೂಡಿಸಿದೆ. ಆದರೆ, ಇದಕ್ಕೆ ಆತಂಕಪಡುವ ಅಗತ್ಯವಿಲ್ಲ. ಚುನಾವಣಾ ಆಯೋಗವು ಮತದಾರರ ಪಟ್ಟಿಯನ್ನು ಕಸರತ್ತು ನಡೆಸಿ ಶುದ್ಧೀಕರಿಸುತ್ತಿರುವುದರಿಂದ ಈ ತಾತ್ಕಾಲಿಕ ಸಮಸ್ಯೆಗಳು ಎದುರಾಗಿವೆ.

ಈ ಎಸ್‌ಐಆರ್ ಪ್ರಕ್ರಿಯೆಯಿಂದಾಗಿ ರಾಜಧಾನಿ ಬೆಂಗಳೂರಿನಲ್ಲೇ ಬರೋಬ್ಬರಿ 46.88 ಲಕ್ಷ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ ಅಥವಾ ಕಡಿತಗೊಳಿಸಲಾಗಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಮತದಾರರ ಸಂಖ್ಯೆ ಕುಸಿದಿರುವುದು ಮುಂಬರುವ ವಾರ್ಡ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ರಾಜಕೀಯ ಲೆಕ್ಕಾಚಾರಗಳನ್ನು ಸಂಪೂರ್ಣವಾಗಿ ಏರುಪೇರು ಮಾಡಿದೆ. ನಕಲಿ ಮತದಾನ ತಡೆಯುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ಸಮರ್ಥಿಸಿಕೊಂಡಿದ್ದರೂ, ತಳಮಟ್ಟದಲ್ಲಿ ಇದು ಅರ್ಹ ನಾಗರಿಕರಿಗೇ ಕುತ್ತು ತಂದಿದೆ ಎಂದು ವರದಿ ಹೇಳಿದೆ.

**ಏನಿದು ಹೊಸ ಪ್ರಕ್ರಿಯೆ? ಸಮಸ್ಯೆ ಎಲ್ಲಿದೆ?**

ಚುನಾವಣಾ ಆಯೋಗವು ಮತದಾರರ ಪಟ್ಟಿಯಿಂದ ನಕಲಿ ಹೆಸರುಗಳು, ಮೃತಪಟ್ಟವರ ವಿವರಗಳು ಹಾಗೂ ಒಂದಕ್ಕಿಂತ ಹೆಚ್ಚು ಕಡೆ ಇರುವ ಹೆಸರುಗಳನ್ನು ತೆಗೆದುಹಾಕಲು ಮನೆ–ಮನೆ ಸಮೀಕ್ಷೆ ನಡೆಸುತ್ತಿದೆ. ಈ ಸಂದರ್ಭದಲ್ಲಿ, ಸುಮಾರು 20 ವರ್ಷಗಳ ಹಿಂದಿನ ಹಳೆಯ ದಾಖಲೆಗಳನ್ನು ಇಂದಿನ ಕಂಪ್ಯೂಟರ್ ವ್ಯವಸ್ಥೆಯೊಂದಿಗೆ ಹೋಲಿಸಿ ನೋಡಲಾಗುತ್ತಿದೆ.

ಈ ಪ್ರಕ್ರಿಯೆಯಲ್ಲಿ ಸಾರ್ವಜನಿಕರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳೆಂದರೆ:

ಹೆಸರು ಹೊಂದಾಣಿಕೆಯಾಗದಿರುವುದು: ಹಳೆಯ ದಾಖಲೆಗಳಿಗೂ, ಇಂದಿನ ಆಧಾರ್ ಅಥವಾ ವೋಟರ್ ಐಡಿಯಲ್ಲಿರುವ ಹೆಸರಿನ ಕಾಗುಣಿತಕ್ಕೂ (Spelling) ವ್ಯತ್ಯಾಸವಿದ್ದರೆ ತಂತ್ರಜ್ಞಾನವು ಅದನ್ನು ತಡೆಹಿಡಿಯುತ್ತದೆ.

* **ಅಧಿಕಾರಿಗಳು ಬಂದಾಗ ಸಿಗದಿರುವುದು:** ಬೂತ್ ಮಟ್ಟದ ಅಧಿಕಾರಿಗಳು (BLO) ನಿಮ್ಮ ಮನೆಗೆ ಬಂದಾಗ ನೀವು ಕೆಲಸದ ಮೇಲೋ ಅಥವಾ ಊರಿಗೋ ಹೋಗಿದ್ದರೆ, ನಿಮ್ಮ ಹೆಸರಿನ ಮುಂದೆ 'ಸ್ಥಳಾಂತರಗೊಂಡಿದ್ದಾರೆ' ಎಂದು ದಾಖಲಾಗುವ ಸಾಧ್ಯತೆ ಇರುತ್ತದೆ.

* **ನೋಟಿಸ್ ಜಾರಿ:** ನಿಮ್ಮ ದಾಖಲೆಗಳಲ್ಲಿ ದೋಷವಿದ್ದರೆ ಅಥವಾ ನಿಮ್ಮ ವಿಳಾಸ ಸರಿಯಾಗಿ ಪತ್ತೆಯಾಗದಿದ್ದರೆ, ಆಯೋಗವು ನಿಮ್ಮ ವಿವರಗಳನ್ನು ಸರಿಪಡಿಸಿಕೊಳ್ಳುವಂತೆ ನೋಟಿಸ್ ನೀಡುತ್ತಿದೆ.

ಎಸ್‌ಐಆರ್ ನೋಟಿಸ್ ಪಡೆದ ಮತದಾರರು ತಮ್ಮ ವಿವರಗಳನ್ನು ಪರಿಶೀಲಿಸಲು ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ಕಚೇರಿಗಳಿಗೆ ಅಲೆಯುತ್ತಿದ್ದಾರೆ. ಆದರೆ, ಅಲ್ಲಿ ಯಾವ ದಾಖಲೆಗಳನ್ನು ಸಲ್ಲಿಸಬೇಕು ಎಂಬ ಬಗ್ಗೆ ತೀವ್ರ ಗೊಂದಲವಿದೆ. ನಾಗರಿಕರು ನಿಯಮಾನುಸಾರ ತಂದಿರುವ ಸಿಂಧುತ್ವ ಹೊಂದಿರುವ ಅಧಿಕೃತ ಗುರುತಿನ ಚೀಟಿಗಳನ್ನು ಕೆಲವು ಬಿಎಲ್‌ಒಗಳು ಕ್ಷುಲ್ಲಕ ಕಾರಣ ನೀಡಿ ತಿರಸ್ಕರಿಸುತ್ತಿದ್ದಾರೆ ಎಂಬ ದೂರುಗಳು ವ್ಯಾಪಕವಾಗಿ ಕೇಳಿಬರುತ್ತಿವೆ. ಕ್ಷೇತ್ರಮಟ್ಟದ ಸಿಬ್ಬಂದಿಗೆ ಸೂಕ್ತ ತರಬೇತಿ ಇಲ್ಲದಿರುವುದು ಈ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದೆ.

ಈ ಹೊಸ ನಿಯಮದ ಪ್ರಕಾರ, ನೋಟಿಸ್ ಬಂದವರು ಖುದ್ದಾಗಿ ಕಚೇರಿಗೆ ಹಾಜರಾಗಿ ಭೌತಿಕ ಪರಿಶೀಲನೆಗೆ ಒಳಪಡುವುದು ಕಡ್ಡಾಯವಾಗಿದೆ. ಇದು ವಯೋವೃದ್ಧರು ಮತ್ತು ಅನಾರೋಗ್ಯ ಪೀಡಿತ ಹಿರಿಯ ನಾಗರಿಕರಿಗೆ ಶಾಪವಾಗಿ ಪರಿಣಮಿಸಿದೆ. ತಾಲೂಕು ಮತ್ತು ವಾರ್ಡ್ ಕಚೇರಿಗಳ ಮೆಟ್ಟಿಲು ಹತ್ತಲಾಗದೆ ವೃದ್ಧರು ಪರದಾಡುತ್ತಿದ್ದಾರೆ. ಅಷ್ಟೇ ಅಲ್ಲದೆ, ಉದ್ಯೋಗ ಅಥವಾ ಶಿಕ್ಷಣಕ್ಕಾಗಿ ತಾತ್ಕಾಲಿಕವಾಗಿ ಹೊರರಾಜ್ಯ ಅಥವಾ ವಿದೇಶಗಳಲ್ಲಿ ವಾಸಿಸುತ್ತಿರುವ ಕನ್ನಡಿಗರಿಗೂ ಇದು ದೊಡ್ಡ ಹೊಡೆತ ನೀಡಿದೆ. ಅವರು ತುರ್ತಾಗಿ ಊರಿಗೆ ಬಂದು ಹಾಜರಾಗದಿದ್ದರೆ ಅವರ ಮತದಾನದ ಹಕ್ಕನ್ನೇ ರದ್ದುಗೊಳಿಸಲಾಗುತ್ತಿದೆ.

**ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ಹೇಗೆ?**

ನಿಮ್ಮ ವೋಟರ್ ಐಡಿ ಸಮಸ್ಯೆ ಬಗೆಹರಿಸಲು ಮತ್ತು ನಿಮ್ಮ ಮತದಾನದ ಹಕ್ಕನ್ನು ಉಳಿಸಿಕೊಳ್ಳಲು ಈ ಸರಳ ಹಂತಗಳನ್ನು ಅನುಸರಿಸಿ:

**1. ಮೊದಲು ಆನ್‌ಲೈನ್‌ನಲ್ಲಿ ಚೆಕ್ ಮಾಡಿ:** ಸರ್ಕಾರಿ ಕಚೇರಿಗಳಿಗೆ ಅಲೆಯುವ ಮುನ್ನ, ನಿಮ್ಮ ಮೊಬೈಲ್ ಅಥವಾ ಕಂಪ್ಯೂಟರ್‌ನಲ್ಲಿ voters.eci.gov.in ವೆಬ್‌ಸೈಟ್‌ಗೆ ಭೇಟಿ ನೀಡಿ. ಅಲ್ಲಿ ನಿಮ್ಮ ವೋಟರ್ ಐಡಿ ಸಂಖ್ಯೆಯನ್ನು ಹಾಕಿ, ನಿಮ್ಮ ಹೆಸರು ಪಟ್ಟಿಯಲ್ಲಿದೆಯೇ ಅಥವಾ ಡಿಲೀಟ್ ಆಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.

**2. ನೋಟಿಸ್ ಬಂದಿದ್ದರೆ ವಿಚಾರಣೆಗೆ ಹೋಗಿ:** ನಿಮಗೆ ಚುನಾವಣಾ ಅಧಿಕಾರಿಗಳಿಂದ ನೋಟಿಸ್ ಬಂದಿದ್ದರೆ, ಅದರಲ್ಲಿ ತಿಳಿಸಿರುವ ದಿನಾಂಕದಂದು ನಿಮ್ಮ ಹತ್ತಿರದ ವಾರ್ಡ್ ಕಚೇರಿ ಅಥವಾ ತಾಲೂಕು ಕಚೇರಿಗೆ ಭೇಟಿ ನೀಡಿ. ಅಧಿಕಾರಿಗಳ ಮುಂದೆ ನಿಮ್ಮ ಅಸಲಿ ದಾಖಲೆಗಳನ್ನು ತೋರಿಸಿ ಗೊಂದಲ ಬಗೆಹರಿಸಿಕೊಳ್ಳಿ.

**3. ಅಗತ್ಯ ದಾಖಲೆಗಳನ್ನು ಒಯ್ಯಿರಿ:** ವಿಚಾರಣೆಗೆ ಹೋಗುವಾಗ ನಿಮ್ಮ ಅಸಲಿ ವೋಟರ್ ಐಡಿ ಕಾರ್ಡ್, ಆಧಾರ್ ಕಾರ್ಡ್ ಹಾಗೂ ಇತ್ತೀಚಿನ ಕರೆಂಟ್ ಬಿಲ್ ಅಥವಾ ರೇಷನ್ ಕಾರ್ಡ್ (ವಿಳಾಸದ ಪುರಾವೆಗಾಗಿ) ಕೊಂಡೊಯ್ಯಿರಿ.

**4. ಸೂಕ್ತ ಅರ್ಜಿ ಸಲ್ಲಿಸಿ:** ಒಂದೊಮ್ಮೆ ನಿಮ್ಮ ಹೆಸರು ಪಟ್ಟಿಯಿಂದ ಸಂಪೂರ್ಣವಾಗಿ ಕಡಿತಗೊಂಡಿದ್ದರೆ ಫಾರಂ 6 ಅನ್ನು ಭರ್ತಿ ಮಾಡಿ ಹೊಸದಾಗಿ ಹೆಸರು ಸೇರಿಸಬಹುದು. ಹೆಸರಿನಲ್ಲಿ ತಪ್ಪುಗಳಿದ್ದರೆ ಅಥವಾ ವಿಳಾಸ ಬದಲಾಗಿದ್ದರೆ ಫಾರಂ 8 ಅನ್ನು ಸಲ್ಲಿಸಿ ಸರಿಪಡಿಸಿಕೊಳ್ಳಬಹುದು.

# ರಾಜ್ಯಕ್ಕೆ ಕಾವೇರಿ ಸಂಕಷ್ಟ

ನವದೆಹಲಿ: ತಮಿಳುನಾಡಿಗೆ ಪ್ರತಿನಿತ್ಯ 15 ದಿನಗಳ ಕಾಲ 4 ಸಾವಿರ ಕ್ಯುಸೆಕ್ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ ಸೂಚನೆ ನೀಡುವ ಮೂಲಕ ಕರ್ನಾಟಕಕ್ಕೆ ದೊಡ್ಡ ಆಘಾತ ನೀಡಿದೆ.

ಕಾವೇರಿ ನೀರು ಹಂಚಿಕೆ ಕುರಿತಂತೆ ದೆಹಲಿಯಲ್ಲಿ ಗುರುವಾರ ಮಹತ್ವದ ಸಿಡಬ್ಲ್ಯುಆರ್‌ಸಿ ಸಭೆ ನಡೆಯಿತು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಕಚೇರಿಯಲ್ಲಿ ನಡೆದ ಅಧ್ಯಕ್ಷ ವಿನೀತ್ ಗುಪ್ತಾ ನೇತೃತ್ವದಲ್ಲಿ ಸಭೆ ನಡೆಯಿತು.

ಕರ್ನಾಟಕದಿಂದ ಕಾವೇರಿ ನಿಗಮದ ಎಂ.ಡಿ. ಮಹೇಶ್ ಹಾಗೂ ತಮಿಳುನಾಡಿನ ಜಲಸಂಪನ್ಮೂಲ ಅಧಿಕಾರಿಗಳು ಭಾಗವಹಿಸಿದ್ದರು. ಕರ್ನಾಟಕದಲ್ಲಿ ಭೀಕರ ಬರಗಾಲ ಪರಿಸ್ಥಿತಿ ಎದುರಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ ಎಂದು ಕರ್ನಾಟಕ ವಾದ ಮಂಡಿಸಿತು.

ಮತ್ತೊಂದೆಡೆ ತನ್ನ ಪಾಲಿನ ನೀರು ಹರಿಸಬೇಕೆಂದು ತಮಿಳುನಾಡು ಅಧಿಕಾರಿಗಳು ಪಟ್ಟು ಹಿಡಿದರು. ಆದರೆ ನೀರು ಹರಿಸುವಂತೆ ಸಿಡಬ್ಲ್ಯು ಆರ್‌ಸಿ ಕರ್ನಾಟಕಕ್ಕೆ ಆದೇಶ ನೀಡಿತು.

ಈ ಮಧ್ಯೆ ತಮಿಳುನಾಡು ಕಾವೇರಿ ನೀರು ಹರಿಸುವಂತೆ ಕಾವೇರಿ ನದಿನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ಶಿಫಾರಸ್ಸನ್ನು ಪ್ರಶ್ನಿಸಿ, ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಇಂದು ನಡೆಯಿತು.

ಸುಪ್ರೀಂಕೋರ್ಟಿನ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠದ ಮುಂದೆ ನಡೆದ ವಿಚಾರಣೆ ವೇಳೆ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಅ. 12ಕ್ಕೆ ಮುಂದೂಡಿತು.

ಕರ್ನಾಟಕದ ಪರ ಹಿರಿಯ ವಕೀಲ ಶ್ಯಾಮ್ ದಿವಾನ್, ರಾಜ್ಯದಲ್ಲಿ ಬರ ಪರಿಸ್ಥಿತಿ ಎದುರಾಗಿದ್ದು, ಸಿಡಬ್ಲ್ಯುಎಂಎ ನಿರ್ದೇಶನ ದಂತೆ ನೀರು ಬಿಡುಗಡೆ ಮಾಡುತ್ತಿದ್ದರೂ ರಾಜ್ಯಕ್ಕೆ ತೀವ್ರ ಸಂಕಷ್ಟ ಎದುರಾಗಿದೆ ಎಂದು ವಾದಿಸಿದರು.

ಕರ್ನಾಟಕದ ಪರ ವಾದ ಮಂಡಿಸಿದ ಶ್ಯಾಮ್ ದಿವಾನ್, ಜಲಾಶಯಗಳಲ್ಲಿನ ನೀರಿನ ಲಭ್ಯತೆ, ಮಳೆ ಕೊರತೆ ಹಾಗೂ ರಾಜ್ಯದ ಪರಿಸ್ಥಿತಿಯನ್ನು ಅಥಾಂ ಪರಿಗಣಿಸಿದೆ. ಪ್ರಾಧಿಕಾರದ ನಿರ್ದೇಶನ ಗಳನ್ನು ಪಾಲಿಸುತ್ತಿದ್ದೇವೆ. ಸಂಕಷ್ಟದ ನಡುವೆಯೂ ಅಗತ್ಯ ಪ್ರಮಾಣದಲ್ಲಿ ನೀರು ಹರಿಸಲು ರಾಜ್ಯ ಪ್ರಯತ್ನಿಸುತ್ತಿದೆ ಎಂದು ತಿಳಿಸಿದರು.

# ನಂದಿನಿ ಹಾಲಿನ ದರ ಏರಿಕೆ ನಿಶ್ಚಿತ




ಬೆಂಗಳೂರು: ರಾಜ್ಯದ 16 ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಬೇಡಿಕೆಗೆ ಮಣಿದಿರುವ ರಾಜ್ಯ ಸರ್ಕಾರ ಹಾಲಿನ ದರವನ್ನು ಲೀಟರ್‌ಗೆ 4 ರಿಂದ 5 ರೂಪಾಯಿ ಹೆಚ್ಚಿಸಲು ಸಾಧ್ಯತೆ ಇದ್ದು, ನಾಳಿನ ಕರ್ನಾಟಕ ಹಾಲು ಮಹಾಮಂಡಳಿ ಸಭೆಯ ನಂತರ ದರ ಹೆಚ್ಚಳದ ಅಧಿಕೃತ ಆದೇಶ ಹೊರಬೀಳುವ ನಿರೀಕ್ಷೆ ಇದೆ.

ಹಾಲಿನ ದರ ಪರಿಷ್ಕರಣೆ ಸಂಬಂಧ ಅಧಿಕೃತವಾಗಿ ಪ್ರಸ್ತಾವನೆ ಸಲ್ಲಿಸುವಂತೆ ಮುಖ್ಯಮಂತ್ರಿ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಕ್ಕೆ ಸೂಚಿಸಿದ್ದಾರೆನ್ನಲಾಗಿದೆ, ಇದರ ಹಿನ್ನೆಲೆಯಲ್ಲಿ ನಾಳಿನ ಕರ್ನಾಟಕ ಹಾಲು ಮಹಾಮಂಡಳಿ ಸಭೆಯಲ್ಲಿ ದರ ಹೆಚ್ಚಳದ ರೂಪುರೇಷೆ ಕುರಿತು ಚರ್ಚೆಯಾಗಲಿದ್ದು,ಸಭೆಯಲ್ಲಿ ನಿರ್ಣಯ ಕೈಗೊಂಡ ಬಳಿಕ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಲಿದ್ದು, ಕೆಎಂಎಫ್‌ನ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದ ನಂತರವೇ ಹೊಸ ದರ ಜಾರಿಗೆ ಬರುವ ದಿನಾಂಕ ಹಾಗೂ ಪರಿಷ್ಕೃತ ದರದ ಕುರಿತು ಅಧಿಕೃತ ಆದೇಶ ಹೊರಬೀಳಲಿದೆ.

ಹಾಲಿನ ಮಾರಾಟ ದರವನ್ನು ಲೀಟರ್‌ಗೆ 8 ರಿಂದ 10 ರೂ. ಮತ್ತು ಹೈನುಗಾರರಿಗೆ ನೀಡುವ ಪ್ರೋತ್ಸಾಹಧನವನ್ನು 8 ರೂ.ಗೆ ಹೆಚ್ಚಳ ಮಾಡುವಂತೆ ಒತ್ತಾಯಿಸಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಪ್ರತಿನಿಧಿಗಳು ರೈತರೊಂದಿಗೆ ಪ್ರತಿಭಟನೆ ನಡೆಸಿ ಬಳಿಕ ಸಿಎಂ ಡಿಕೆ ಶಿವಕುಮಾರ್‌ಗೂ ಮನವಿ ಮಾಡಿದ್ದರು. ಅಲ್ಲದೆ, ರಾಜ್ಯದಲ್ಲಿ ತೀವ್ರ ಬರಗಾಲವಿದ್ದು, ಶೇ. 70ರಷ್ಟು ಮಳೆ ಕೊರತೆ ಉಂಟಾಗಿದೆ. ಇದರಿಂದ ಹುಲ್ಲಿನ ಕೊರತೆಯಾಗಿದ್ದು, ಪಶು ಆಹಾರದ ಕಚ್ಚಾ ಸಾಮಗ್ರಿ, ಮೆಕ್ಕೆಜೋಳ, ಇಂಡಿ–ಬೂಸಾದ ದರ ಶೇ. 25ರಷ್ಟು ಏರಿಕೆಯಾಗಿದೆ. ರಾಸುಗಳಿಗೆ ಬಳಸುವ ನೆಲಹಾಸು ದರ ಹೆಚ್ಚಳವಾಗಿದ್ದು, ಪೆಟ್ರೋಲ್, ಡೀಸೆಲ್ ದರವೂ ಏರಿಕೆಯಾಗಿದೆ. ಹೀಗಾಗಿ ದರ ಏರಿಕೆ ಮಾಡಬೇಕು ಎಂದು ಒಕ್ಕೂಟ ಪ್ರಸ್ತಾವನೆ ಇಟ್ಟಿತ್ತು. ಹೀಗಾಗಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ದರ ಏರಿಕೆ ಬೇಡಿಕೆಗೆ ಸರ್ಕಾರದಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದ್ದು, ಹಾಲಿನ ದರವನ್ನು ಲೀಟರ್‌ಗೆ 4 ರಿಂದ 5 ರೂಪಾಯಿ ಹೆಚ್ಚಳ ಮಾಡುವುದು ಬಹುತೇಕ ಖಚಿತವಾಗಿದೆ.

ನಂದಿನಿ ಹಾಲಿನ ಮಾರಾಟ ದರವನ್ನು ಕೊನೆಯ ಬಾರಿಗೆ 2025ರ ಏಪ್ರಿಲ್‌ನಲ್ಲಿ ಲೀಟರ್‌ಗೆ 4 ರೂ. ಹೆಚ್ಚಳ ಮಾಡಲಾಗಿತ್ತು. ಇದೀಗ ನಂದಿನಿ ಹಾಲಿನ ದರ 46 ರೂ. ಇದ್ದು, ಬೆಲೆ ಹೆಚ್ಚಳವಾದರೆ ಪರಿಷ್ಕೃತ ದರ ಲೀಟರ್‌ಗೆ 50 ಅಥವಾ 51 ರೂ. ಆಗಲಿದೆ. ಗ್ರಾಹಕರ ಜೇಬಿಗೆ ಕತ್ತರಿ ಬೀಳಲಿದೆ.

ಈ ಹೆಚ್ಚುವರಿ ಮೊತ್ತವನ್ನು ರೈತರು ಮತ್ತು ಹಾಲು ಒಕ್ಕೂಟಗಳಿಗೆ 70:30ರ ಅನುಪಾತದಲ್ಲಿ ಹಂಚಿಕೆ ಮಾಡಲಾಗುತ್ತದೆ. ಪಶು ಆಹಾರ, ಮೇವು, ಸಾಗಣೆ ಮತ್ತು ಪ್ಯಾಕೇಜಿಂಗ್ ವೆಚ್ಚಗಳು ಗಣನೀಯವಾಗಿ ಹೆಚ್ಚಾಗಿರುವುದರಿಂದ ಬೆಲೆ ಏರಿಕೆ ಅನಿವಾರ್ಯವಾಗಿದೆ ಎಂದು ಒಕ್ಕೂಟಗಳು ತಿಳಿಸಿವೆ. ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಈಗಲೂ ಹಾಲಿನ ದರ ಕಡಿಮೆ ಇದೆ ಎನ್ನುವ ವಾದ ರೈತರದ್ದಾಗಿದೆ.

ತುಮಕೂರು (ಮಧುಗಿರಿ), ಚಿಕ್ಕಬಳ್ಳಾಪುರ ಮತ್ತು ಬೆಂಗಳೂರಿನ ಫ್ರೀಡಂ ಪಾರ್ಕ್ ಸೇರಿದಂತೆ ರಾಜ್ಯದ ವಿವಿಧೆಡೆ ರೈತರು ದೊಡ್ಡ ಮಟ್ಟದ ಪ್ರತಿಭಟನೆಗಳನ್ನು ನಡೆಸಿದ್ದರು. ಪ್ರತಿ ಲೀಟರ್ ಹಾಲಿನ ಖರೀದಿ ದರವನ್ನು ಮತ್ತು ಸರ್ಕಾರದ ಪ್ರೋತ್ಸಾಹ ಧನವನ್ನು ತಲಾ 5 ರಿಂದ 8 ರಷ್ಟು ಹೆಚ್ಚಿಸಬೇಕೆಂದು ರೈತ ಮುಖಂಡರು ಸರ್ಕಾರಕ್ಕೆ ಗಡುವು ನೀಡಿದ್ದರು.

# ಕರ್ನಾಟಕದಲ್ಲಿ ಪಶ್ಚಿಮ ಬಂಗಾಳದ ಪರಿಸ್ಥಿತಿ ಬರಲು ಬಿಡುವುದಿಲ್ಲ: ನಟ ಪ್ರಕಾಶ್ ರಾಜ್

ಕಲಬುರಗಿ: ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್‌ಗೆ ಸಂಬಂಧಿಸಿದಂತೆ ಲಕ್ಷಾಂತರ ಪ್ರಕರಣಗಳು ಟ್ರಿಬ್ಯುನಲ್‌ಗೆ ಹೋಗಿವೆ. ಈ ಪ್ರಕರಣಗಳ ವಿಚಾರಣೆ ಪೂರ್ಣಗೊಳ್ಳಲು 15 ವರ್ಷಗಳು ಬೇಕಾಗಬಹುದು. ಅಂತಹ ಪರಿಸ್ಥಿತಿ ಕರ್ನಾಟಕದಲ್ಲಿ ಆಗಲು ಬಿಡಬಾರದು ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಹೇಳಿದರು.

ನಗರದ ರಿಂಗ್ ರಸ್ತೆಯ ರಾಮನಗರ ಹಾಗೂ ಮಿಸ್ಬಾ ಕಾಲೋನಿಯಲ್ಲಿ ಎಸ್‌ಐಆರ್ ಪರಿಶೋಧನೆ ಹಾಗೂ ಪ್ರತಿರೋಧ ಪ್ರವಾಸದ ಅಂಗವಾಗಿ ನಿವಾಸಿಗಳೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಸಾಮಾನ್ಯ ಜನರು ಸಂಕಷ್ಟ ಎದುರಿಸುತ್ತಿದ್ದು, ಯಾವ ದಾಖಲೆಗಳನ್ನು ಸಲ್ಲಿಸಬೇಕು ಎಂಬುದರ ಕುರಿತು ಸ್ಪಷ್ಟತೆ ನೀಡದೆ ಜನರನ್ನು ಪರದಾಡಿಸಲಾಗುತ್ತಿದೆ ಎಂದು ಅವರು ಆರೋಪಿಸಿದರು.

ಎಸ್‌ಐಆರ್‌ಗೆ ಸಂಬಂಧಿಸಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸೆಪ್ಟೆಂಬರ್ 30ರೊಳಗೆ ದಾಖಲೆಗಳನ್ನು ಸಂಗ್ರಹಿಸಿ ರಾಜ್ಯ ಸರಕಾರದ ಮುಂದಿಡಲಾಗುವುದು. ಅಕ್ಟೋಬರ್ 1ರಂದು ದಿಲ್ಲಿಯಲ್ಲಿ ಸುದ್ದಿಗೋಷ್ಠಿ ನಡೆಸಲಾಗುವುದು. ಅ. 15ರಂದು ದಿಲ್ಲಿಯ ಜಂತರ್ ಮಂತರನಲ್ಲಿ ಕರ್ನಾಟಕ ಮಾತ್ರವಲ್ಲದೆ ಬೇರೆ ರಾಜ್ಯಗಳ ಸಂತ್ರಸ್ತ ಜನರೂ ಸೇರಲಿದ್ದಾರೆ ಎಂದು ಹೇಳಿದರು.

# ಅಡುಗೆ ಎಣ್ಣೆ ಮೇಲಿನ ಆಮದು ಸುಂಕ ಕಡಿತ



ನವದೆಹಲಿ: ಹಬ್ಬದ ಋತು ಆರಂಭಕ್ಕೂ ಮುನ್ನ ಕೇಂದ್ರ ಸರ್ಕಾರ ಅಡುಗೆ ಎಣ್ಣೆಗಳ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಗಣನೀಯವಾಗಿ ಕಡಿತಗೊಳಿಸಿದೆ. ತಾಳೆ ಎಣ್ಣೆ, ಸೋಯಾಬೀನ್ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆ ಸೇರಿದಂತೆ ಪ್ರಮುಖ ಖಾದ್ಯ ತೈಲಗಳ ಆಮದು ಸುಂಕ ಪರಿಷ್ಕರಣೆ ಸೆ.24ರಿಂದಲೇ ಜಾರಿಗೆ ಬಂದಿದೆ.

ಕೇಂದ್ರ ಸರ್ಕಾರದ ಅಧಿಸೂಚನೆಯ ಪ್ರಕಾರ, ಕಚ್ಚಾ ಸೂರ್ಯಕಾಂತಿ ಎಣ್ಣೆಯ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಶೇ.10ರಿಂದ ಶೂನ್ಯಕ್ಕೆ ಇಳಿಸಲಾಗಿದೆ. ಸಂಸ್ಕರಿತ ಸೂರ್ಯಕಾಂತಿ ಎಣ್ಣೆಯ ಮೇಲಿನ ಸುಂಕವನ್ನು ಶೇ.32.5ರಿಂದ ಶೇ.22.5ಕ್ಕೆ ಕಡಿತ ಮಾಡಲಾಗಿದೆ.

ಅದೇ ರೀತಿ, ಕಚ್ಚಾ ತಾಳೆ ಎಣ್ಣೆ ಹಾಗೂ ಕಚ್ಚಾ ಸೋಯಾಬೀನ್ ಎಣ್ಣೆಯ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಶೇ.10ರಿಂದ ಶೇ.5ಕ್ಕೆ ಇಳಿಸಲಾಗಿದೆ. ಸಂಸ್ಕರಿತ ತಾಳೆ ಎಣ್ಣೆ ಮತ್ತು ಸಂಸ್ಕರಿತ ಸೋಯಾಬೀನ್ ಎಣ್ಣೆಯ ಮೇಲಿನ ಆಮದು ಸುಂಕವನ್ನು ಶೇ.32.5ರಿಂದ ಶೇ.27.5ಕ್ಕೆ ಇಳಿಸಲಾಗಿದೆ.

2025ರಲ್ಲಿ ಕೇಂದ್ರ ಸರ್ಕಾರ ಕಚ್ಚಾ ಖಾದ್ಯ ತೈಲಗಳ ಮೇಲಿನ ಸುಂಕವನ್ನು ಶೇ.20ರಿಂದ ಶೇ.10ಕ್ಕೆ ಇಳಿಸಿತ್ತು. ಇದೀಗ ಮತ್ತೊಮ್ಮೆ ಸುಂಕ ಕಡಿತ ಮಾಡಿರುವುದರಿಂದ ದೇಶೀಯ ಮಾರುಕಟ್ಟೆಯಲ್ಲಿ ಖಾದ್ಯ ತೈಲಗಳ ಬೆಲೆ ಇಳಿಕೆಯಾಗುವ ನಿರೀಕ್ಷೆ ಮೂಡಿದೆ.

ಹಬ್ಬದ ಸಂದರ್ಭದಲ್ಲಿ ಮನೆ ಬಳಕೆಯ ಜೊತೆಗೆ ಹೋಟೆಲ್, ರೆಸ್ಟೋರೆಂಟ್, ಕ್ಯಾಟರಿಂಗ್ ಮತ್ತು ಸಿಹಿತಿಂಡಿ ತಯಾರಿಕಾ ವಲಯಗಳಲ್ಲಿ ಖಾದ್ಯ ತೈಲದ ಬೇಡಿಕೆ ಹೆಚ್ಚಾಗಲಿದೆ. ಈ ಸಂದರ್ಭದಲ್ಲಿ ಸುಂಕ ಕಡಿತವಾಗಿರುವುದು ಆಮದು ಮಾಡಿಕೊಳ್ಳುವ ಎಣ್ಣೆಗಳ ಇಳಿದ ವೆಚ್ಚಕ್ಕೆ ಕಾರಣವಾಗಿ, ಚಿಲ್ಲರೆ ಬೆಲೆಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಭಾರತೀಯ ಸಸ್ಯಜನ್ಯ ತೈಲ ಉತ್ಪಾದಕರ ಸಂಘ ತಿಳಿಸಿದೆ.

ಸಂಘದ ಅಧ್ಯಕ್ಷ ಸುಧಾಕರ್ ದೇಸಾಯಿ ಅವರ ಪ್ರಕಾರ, ಸೂರ್ಯಕಾಂತಿ ಎಣ್ಣೆಯ ಮೇಲಿನ ಸುಂಕ ಕಡಿತವು ವಿಶೇಷವಾಗಿ ಗಮನಾರ್ಹವಾಗಿದ್ದು, ಸೂರ್ಯಕಾಂತಿ ಎಣ್ಣೆ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗುವ ದಕ್ಷಿಣ ಭಾರತದಲ್ಲಿ ಇದರ ಪರಿಣಾಮ ಕಂಡುಬರುವ ಸಾಧ್ಯತೆ ಇದೆ. ಆದರೆ, ಗ್ರಾಹಕರಿಗೆ ನಿಜವಾದ ಬೆಲೆ ಇಳಿಕೆಯ ಪ್ರಮಾಣವು ಜಾಗತಿಕ ಖಾದ್ಯ ತೈಲ ಬೆಲೆ, ಸಾಗರ ಸಾಗಣೆ ವೆಚ್ಚ, ರೂಪಾಯಿ ಡಾಲರ್ ವಿನಿಮಯ ದರ ಹಾಗೂ ಮಾರುಕಟ್ಟೆಯಲ್ಲಿರುವ ಹಳೆಯ ದಾಸ್ತಾನು ಸೇರಿದಂತೆ ಹಲವು ಅಂಶಗಳ ಮೇಲೆ ಅವಲಂಬಿತವಾಗಿರಲಿದೆ ಎಂದು IVPA ಎಚ್ಚರಿಸಿದೆ.

# ಆಡಳಿತ ಯಂತ್ರಕ್ಕೆ ಸರ್ಜರಿ: ಅಧಿಕಾರಿಗಳ ಎತ್ತಂಗಡಿ

ಬೆಂಗಳೂರು: ರಾಜ್ಯ ಸರ್ಕಾರ ಆಡಳಿತ ಯಂತ್ರಕ್ಕೆ ಬುಧವಾರ ಮಹತ್ವದ ಬದಲಾವಣೆ ಮಾಡಿದ್ದು, ಹಲವು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ.

ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಕಾರ್ಯದರ್ಶಿಯಾಗಿದ್ದ ಡಾ. ಕೆ.ವಿ. ತ್ರಿಲೋಕಚಂದ್ರ ಅವರನ್ನು ಕೃಷಿ ಇಲಾಖೆಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಇದುವರೆಗೆ ಕೃಷಿ ಇಲಾಖೆ ಕಾರ್ಯದರ್ಶಿಯಾಗಿದ್ದ ಕ್ಯಾಪ್ಟನ್ ರಾಜೇಂದ್ರ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಅವರಿಗೆ ಯಾವುದೇ ಹೊಸ ಹುದ್ದೆ ತೋರಿಸಿಲ್ಲ.

ಸಮಾಜ ಕಲ್ಯಾಣ ಇಲಾಖೆ ಆಯುಕ್ತರಾಗಿದ್ದ ಡಾ. ಕೆ. ರಾಕೇಶ್ ಕುಮಾರ್ ಅವರನ್ನು ಉಪಮುಖ್ಯಮಂತ್ರಿಗಳ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ. ಇದರೊಂದಿಗೆ ಸರ್ವೆ, ಸೆಟ್ಲ್‌ಮೆಂಟ್ ಮತ್ತು ಭೂ ದಾಖಲೆಗಳ ಇಲಾಖೆಯ ಆಯುಕ್ತರ ಹೆಚ್ಚುವರಿ ಜವಾಬ್ದಾರಿಯನ್ನೂ ಅವರಿಗೆ ವಹಿಸಲಾಗಿದೆ. ಈ ಹುದ್ದೆಯಲ್ಲಿದ್ದ ಕೆ. ವೆಂಕಟರಾಜಾ ಅವರಿಗೂ ಹೊಸ ಸ್ಥಳ ನಿಯೋಜನೆ ಮಾಡಿಲ್ಲ.

ಪಂಚಾಯತ್ ರಾಜ್ ಇಲಾಖೆ ಆಯುಕ್ತರಾಗಿದ್ದ ಡಾ. ಅರುಂಧತಿ ಚಂದ್ರಶೇಖರ್ ಅವರನ್ನು ಖಜಾನೆ ಇಲಾಖೆಯ ಆಯುಕ್ತರನ್ನಾಗಿ ನೇಮಿಸಲಾಗಿದೆ. ಎಂಎಸ್ಎಂಇ ನಿರ್ದೇಶಕರಾಗಿದ್ದ ವೈ.ಎಸ್. ಪಾಟೀಲ ಅವರನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರಾಗಿ ವರ್ಗಾಯಿಸಲಾಗಿದ್ದು, ಪಂಚಾಯತ್ ರಾಜ್ ಆಯುಕ್ತ ಹಾಗೂ ಕರ್ನಾಟಕ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಕಾರ್ಯನಿರ್ವಾಹಕ ನಿರ್ದೇಶಕರ ಹೆಚ್ಚುವರಿ ಹೊಣೆಯನ್ನೂ ನೀಡಲಾಗಿದೆ.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ) ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಎಂ.ಎಲ್. ವೈಶಾಲಿ ಅವರನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್ಐಎಲ್) ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಿಸಲಾಗಿದೆ. ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಶಿಧರ ಕುರೇರಾ ಅವರಿಗೆ ಹಟ್ಟಿ ಚಿನ್ನದ ಗಣಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಹೆಚ್ಚುವರಿ ಹೊಣೆ ವಹಿಸಲಾಗಿದೆ.

# ವಿನೂತನ ಪ್ರಯೋಗ ಪ್ಲಾಸ್ಟಿಕ್ ತ್ಯಾಜ್ಯದಿಂದ ರಸ್ತೆ




ರಸ್ತೆ ನಿರ್ಮಾಣ ಎಂದರೆ ಡಾಂಬರು, ಜಲ್ಲಿ, ಮರಳು ಮತ್ತು ಬಿಟುಮಿನ್ ಎಂಬ ಸಾಂಪ್ರದಾಯಿಕ ಕಲ್ಪನೆ ನಮ್ಮ ಮನಸ್ಸಿಗೆ ಬರುತ್ತದೆ. ಆದರೆ ಹೆಚ್ಚುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಪರಿಹಾರ ಹುಡುಕುವ ಪ್ರಯತ್ನದಲ್ಲಿ ವಿಶ್ವದ ಹಲವು ನಗರಗಳು ತ್ಯಾಜ್ಯ ಪ್ಲಾಸ್ಟಿಕ್ ಅನ್ನು ರಸ್ತೆ ನಿರ್ಮಾಣದ ವಸ್ತುವಾಗಿ ಬಳಸುವ ಪ್ರಯೋಗ ನಡೆಸುತ್ತಿವೆ. ಚೀನಾದ ಶಾಂಘೈನಲ್ಲಿ ಹಾಲಿನ ಬಾಟಲಿಗಳಿಂದ ಹಿಡಿದು ಪುಣೆ ಮತ್ತು ಬೆಂಗಳೂರಿನ ರಸ್ತೆಗಳಲ್ಲಿ ಪ್ಲಾಸ್ಟಿಕ್ ಮಿಶ್ರಣದ ಪ್ರಯೋಗಗಳವರೆಗೆ, ಇದು ತ್ಯಾಜ್ಯ ನಿರ್ವಹಣೆ ಮತ್ತು ರಸ್ತೆ ನಿರ್ಮಾಣವನ್ನು ಒಂದೇ ವೇದಿಕೆಯಲ್ಲಿ ಜೋಡಿಸುವ ಪ್ರಯತ್ನವಾಗಿದೆ.

2021ರ ಏಪ್ರಿಲ್ 22ರಂದು ಭೂಮಿದಿನದ ಅಂಗವಾಗಿ ಚೀನಾದ ಶಾಂಘೈಯಲ್ಲಿರುವ East China University of Science and Technology ಆವರಣದಲ್ಲಿ ವಿಶೇಷ ರಸ್ತೆ ಯೋಜನೆಯನ್ನು ಪರಿಚಯಿಸಲಾಯಿತು. ಡೌ (Dow) ಮತ್ತು ಚೀನಾದ ಹಾಲಿನ ಉತ್ಪನ್ನಗಳ ಕಂಪನಿ Shiny Meadow ಸಹಯೋಗದಲ್ಲಿ ನಡೆದ ಈ ಯೋಜನೆಯಲ್ಲಿ 6,000ಕ್ಕೂ ಹೆಚ್ಚು ಬಳಸಿದ ಪ್ಲಾಸ್ಟಿಕ್ ಹಾಲಿನ ಬಾಟಲಿಗಳು ಹಾಗೂ ಇತರ ಕಷ್ಟಪಟ್ಟು ಮರುಬಳಕೆ ಮಾಡಬಹುದಾದ ಪ್ಲಾಸ್ಟಿಕ್ ತ್ಯಾಜ್ಯವನ್ನು ರಸ್ತೆ ನಿರ್ಮಾಣಕ್ಕೆ ಬಳಸಲಾಯಿತು.

ಆದರೆ ಇಲ್ಲಿ ಒಂದು ಮುಖ್ಯ ಅಂಶವನ್ನು ಗಮನಿಸಬೇಕು. ಬಾಟಲಿಗಳನ್ನು ಹಾಗೆಯೇ ರಸ್ತೆಗೆ ಹಾಕಲಾಗಿಲ್ಲ. ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಸ್ಕರಿಸಿ polymer-modified asphalt ತಂತ್ರಜ್ಞಾನದ ಮೂಲಕ ಡಾಂಬರು ಮಿಶ್ರಣದ ಭಾಗವನ್ನಾಗಿ ಮಾಡಲಾಯಿತು. ಅಂದರೆ ಇದು "ಪ್ಲಾಸ್ಟಿಕ್‌ನಿಂದ ಸಂಪೂರ್ಣ ರಸ್ತೆ"ಗಿಂತ ಮರುಬಳಕೆಯ ಪ್ಲಾಸ್ಟಿಕ್ ಸೇರಿಸಿದ ಡಾಂಬರು ರಸ್ತೆ ಎಂಬುದು ಹೆಚ್ಚು ಸರಿಯಾದ ವಿವರಣೆ. ಈ ಪ್ರಯೋಗದ ಉದ್ದೇಶ ಕೇವಲ ರಸ್ತೆ ಬಾಳಿಕೆ ಹೆಚ್ಚಿಸುವುದಲ್ಲ. ಸಾಮಾನ್ಯ ಮರುಬಳಕೆ ವ್ಯವಸ್ಥೆಯಲ್ಲಿ ಮೌಲ್ಯ ಕಡಿಮೆ ಇರುವ ಅಥವಾ ಸಂಸ್ಕರಿಸಲು ಕಷ್ಟವಾಗುವ ಪ್ಲಾಸ್ಟಿಕ್‌ಗೆ ಎರಡನೇ ಜೀವನ ನೀಡುವುದು ಇದರ ಪ್ರಮುಖ ಉದ್ದೇಶವಾಗಿತ್ತು.

ಭಾರತದಲ್ಲಿಯೂ ಪ್ಲಾಸ್ಟಿಕ್-ಡಾಂಬರು ರಸ್ತೆಗಳ ಪ್ರಯೋಗ ಹೊಸದಲ್ಲ. ಪುಣೆ ಮಹಾನಗರ ಪಾಲಿಕೆ 2016ರಲ್ಲಿ ನವಿ ಪೇಠ್‌ನ ಭಗವತ್ ಲೇನ್‌ನಲ್ಲಿ ಸುಮಾರು 150 ಮೀಟರ್ ಉದ್ದದ ಪ್ಲಾಸ್ಟಿಕ್-ಬಿಟುಮಿನ್ ರಸ್ತೆ ನಿರ್ಮಿಸಿತ್ತು ಎಂದು ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಮಿಷನ್‌ನ ದಾಖಲೆಗಳು ಉಲ್ಲೇಖಿಸುತ್ತವೆ. ನಂತರ ಪುಣೆಯ ವಿವಿಧ ಭಾಗಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಬಿಟುಮಿನ್‌ನೊಂದಿಗೆ ಬಳಸುವ ಪ್ರಯೋಗಗಳು ನಡೆದಿವೆ. 2025ರಲ್ಲಿಯೂ ಪುಣೆಯಲ್ಲಿ 250 ಮೀಟರ್ ಉದ್ದದ ಪ್ಲಾಸ್ಟಿಕ್-ಬಿಟುಮಿನ್ ರಸ್ತೆ ನಿರ್ಮಾಣದ ವರದಿ ಪ್ರಕಟವಾಗಿದ್ದು, ಈ ತಂತ್ರಜ್ಞಾನವನ್ನು ಮತ್ತಷ್ಟು ಪರೀಕ್ಷಿಸುವ ಪ್ರಯತ್ನ ಮುಂದುವರಿದಿರುವುದನ್ನು ತೋರಿಸುತ್ತದೆ.

ಇದೇ ತರಹ ಪ್ಲಾಸ್ಟಿಕ್ ತ್ಯಾಜ್ಯ ಸಮಸ್ಯೆ ಹೆಚ್ಚಿರುವ ಬೆಂಗಳೂರಿನಲ್ಲಿ ಸಹ ಇಂತಹ ಪ್ರಯೋಗಗಳನ್ನು ನಡೆಸಿದ್ದು, 2022ರಲ್ಲಿ ಖಿಒಚಿ ಇಛಿಂತಿಂಡಿಟಜ ಮತ್ತು ಔಣಾಣಜಡಿ ಖಿಟಿಂ ಖಂಚಿಜ ಸಂಪರ್ಕಿಸುವ ರಸ್ತೆಯಲ್ಲಿ ಸುಮಾರು 3,000 ಕೆ.ಜಿ. ಮರುಬಳಕೆಯ ಪ್ಲಾಸ್ಟಿಕ್ ತ್ಯಾಜ್ಯ ಬಳಸಿ ರಸ್ತೆ ನಿರ್ಮಿಸಲಾಗಿದೆ. ಈ ಯೋಜನೆಯಲ್ಲಿ ಸಾಂಪ್ರದಾಯಿಕ ಪ್ಲಾಸ್ಟಿಕ್-ಬಿಟುಮಿನ್ ವಿಧಾನಕ್ಕಿಂತ ವಿಭಿನ್ನವಾಗಿ ಮರುಬಳಕೆಯ ಪ್ಲಾಸ್ಟಿಕ್ ಆಧಾರಿತ ಕಾಂಕ್ರೀಟ್ ರಸ್ತೆ ತಂತ್ರವನ್ನು ಬಳಸಲಾಗಿದೆ.

ಬೆಂಗಳೂರಿನಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಬಿಟುಮಿನ್‌ನೊಂದಿಗೆ ಬೆರೆಸಿ ರಸ್ತೆ ನಿರ್ಮಿಸುವ ಪ್ರಯೋಗಗಳೂ ಹಿಂದಿನಿಂದ ನಡೆದಿವೆ. ಕೆಲವು ಯೋಜನೆಗಳಲ್ಲಿ ಪ್ಲಾಸ್ಟಿಕ್ ಮತ್ತು ಬಿಟುಮಿನ್ ಅನ್ನು ನಿರ್ದಿಷ್ಟ ಅನುಪಾತದಲ್ಲಿ ಬಳಸುವ ವಿಧಾನ ಅನುಸರಿಸಲಾಗಿದೆ.

ಭಾರತದ ನಗರಗಳಲ್ಲಿ ಪ್ರತಿದಿನ ಅಪಾರ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಅದರಲ್ಲಿ ಎಲ್ಲವನ್ನೂ ಸಾಂಪ್ರದಾಯಿಕವಾಗಿ ಮರುಬಳಕೆ ಮಾಡಲು ಸಾಧ್ಯವಿಲ್ಲ. ಇಂತಹ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ರಸ್ತೆ ನಿರ್ಮಾಣದಲ್ಲಿ ಬಳಸಲು ಸಾಧ್ಯವಾದರೆ ಕಸ ವಿಲೇವಾರಿ ಸಮಸ್ಯೆ, ರಸ್ತೆ ನಿರ್ಮಾಣಕ್ಕೆ ಬೇಕಾಗುವ ಕೆಲವು ಕಚ್ಚಾ ವಸ್ತುಗಳ ಬೇಡಿಕೆ ಮತ್ತು ಪ್ಲಾಸ್ಟಿಕ್ ಮಾಲಿನ್ಯ-ಮೂರು ಸಮಸ್ಯೆಗಳನ್ನು ಒಂದೇ ಸಮಯದಲ್ಲಿ ಬಗೆಹರಿಸಿದಂತಾಗುತ್ತದೆ.

ಚೀನಾದ 6,000ಕ್ಕೂ ಹೆಚ್ಚು ಹಾಲಿನ ಬಾಟಲಿಗಳ ಪ್ರಯೋಗ, ಪುಣೆಯ ಪ್ಲಾಸ್ಟಿಕ್-ಬಿಟುಮಿನ್ ರಸ್ತೆ ಮತ್ತು ಬೆಂಗಳೂರಿನ ಮರುಬಳಕೆಯ ಪ್ಲಾಸ್ಟಿಕ್ ರಸ್ತೆ ಪ್ರಯೋಗಗಳು ಒಂದು ಪ್ರಮುಖ ಸಂದೇಶವನ್ನೇ ನೀಡುತ್ತವೆ: ತ್ಯಾಜ್ಯವೆಂದು ತಿರಸ್ಕರಿಸುವ ವಸ್ತುವನ್ನು ಸರಿಯಾದ ತಂತ್ರಜ್ಞಾನದಿಂದ ಮೂಲಸೌಕರ್ಯದ ಸಂಪನ್ಮೂಲವನ್ನಾಗಿ ಪರಿವರ್ತಿಸಬಹುದೆಂಬ ಆಲೋಚನೆ ಕಾರ್ಯರೂಪವಾಗುತ್ತಿದೆ.

ಇದೀಗ ಅಗತ್ಯವಿರುವುದು ದೊಡ್ಡ ಪ್ರಮಾಣದ ಘೋಷಣೆಗಳಲ್ಲ; ವೈಜ್ಞಾನಿಕ ಪರೀಕ್ಷೆ, ಗುಣಮಟ್ಟದ ಮಾನದಂಡ, ದೀರ್ಘಾವಧಿಯ ಮೇಲ್ವಿಚಾರಣೆ ಮತ್ತು ಪಾರದರ್ಶಕ ಫಲಿತಾಂಶಗಳ ಪ್ರಕಟಣೆ. ಪ್ರಯೋಗ ಯಶಸ್ವಿಯಾದರೆ ಬೆಂಗಳೂರು ಸೇರಿದಂತೆ ಭಾರತದ ಮಹಾನಗರಗಳಲ್ಲಿ ರಸ್ತೆ ನಿರ್ಮಾಣದ ಜೊತೆಗೆ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯಲ್ಲೂ ಹೊಸ ಅಧ್ಯಾಯ ಆರಂಭವಾಗಬಹುದು. ಈ ತಾಜ್ಯ ಮರುಬಳಕೆ ಸಂಶೋಧ'ನೆ ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತೆಂದು ಕಾದು ನೋಡಬೇಕಿದೆ.

ಚೀನಾದ 6,000 ಬಾಟಲಿಗಳ ರಸ್ತೆ ಒಂದು ಕುತೂಹಲಕಾರಿ ಪ್ರಯೋಗವಾಗಿದ್ದರೆ, ಪುಣೆ ಮತ್ತು ಬೆಂಗಳೂರು ಅದೇ ಕಲ್ಪನೆಯನ್ನು ಭಾರತೀಯ ಪರಿಸ್ಥಿತಿಯಲ್ಲಿ ಪರೀಕ್ಷಿಸುತ್ತಿರುವ ಪ್ರಯೋಗಾಲಯಗಳಾಗಿವೆ. ರಸ್ತೆ ಎಷ್ಟು ಬಾಳಿಕೆ ಬರುತ್ತದೆ ಎಂಬುದಷ್ಟೇ ಅಲ್ಲ-ಈ ಪ್ರಯೋಗಗಳು ನಮ್ಮ ಪ್ಲಾಸ್ಟಿಕ್ ತ್ಯಾಜ್ಯವನ್ನು ಎಷ್ಟು ಜವಾಬ್ದಾರಿಯುತವಾಗಿ ನಿರ್ವಹಿಸಬಲ್ಲೆವು ಎಂಬುದನ್ನು ಮುಂಬರುವ ದಿನಗಳಲ್ಲಿ ಕಾದುನೋಡಬೇಕಿದೆ.

## ಮನೆಮನೆಗೆ ಪೊಲೀಸ್‌ಗೆ ಒಂದು ವರ್ಷ

ಬೆಂಗಳೂರು: ಸಾರ್ವಜನಿಕರು ಮತ್ತು ಪೊಲೀಸರ ನಡುವಿನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ದೇಶದಲ್ಲೇ ಮೊಟ್ಟಮೊದಲ ಬಾರಿಗೆ ರಾಜ್ಯ ಸರ್ಕಾರ ಜಾರಿಗೆ ತಂದಿರುವ 'ಮನೆ ಮನೆಗೆ ಪೊಲೀಸ್' ಯೋಜನೆಯು ಒಂದು ವರ್ಷ ಪೂರೈಸಿದೆ.

ಕಳೆದ 2025ರ ಜುಲೈ 18ರಂದು ರಾಜಧಾನಿ ಬೆಂಗಳೂರಿನಲ್ಲಿ ಆರಂಭಗೊಂಡ ಮನೆ ಮನೆಗೆ ಪೊಲೀಸ್ ಯೋಜನೆಗೆ ನಿರೀಕ್ಷಿತ ಯಶಸ್ಸು ದೊರೆಯದೇ ಇದ್ದರೂ ಜನ ಸಾಮಾನ್ಯರಲ್ಲಿ ಪೊಲೀಸ್ ಠಾಣೆ, ಪೊಲೀಸ್ ಎಂದರೆ ಭಯ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿ ಕಾನೂನಿನ ಅರಿವು ಹೆಚ್ಚಾಗಿದೆ.

ಇದರ ಜೊತೆಗೆ ಕಾನೂನು ಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕಿ ಯಾವುದೇ ರೀತಿಯ ಅಪರಾಧ ಕೃತ್ಯ ನಡೆದ ತಕ್ಷಣವೇ ಸ್ಥಳಕ್ಕೆ ಧಾವಿಸುವುದು ಸ್ಥಳೀಯವಾಗಿ ಶಾಂತಿ ಸುವ್ಯವಸ್ಥೆ ನೆಲೆಸಲು ನಗರದಲ್ಲಿ ಮನೆ ಮನೆಗೆ ಪೊಲೀಸ್ ಯೋಜನೆ ಯಶಸ್ವಿಯಾಗಿದೆ.

ಪ್ರತಿ ಮನೆಗೂ ಪೊಲೀಸರು ಭೇಟಿ ನೀಡಿ, ಜನರ ಸಮಸ್ಯೆಗಳನ್ನು ಆಲಿಸುವುದು, ಕಾನೂನಿಗೆ ಸಂಬಂಧಿತ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲು ಮತ್ತು ಪೊಲೀಸ್ ಇಲಾಖೆಗೆ ಅಗತ್ಯವಿರುವ ಮಾಹಿತಿಯನ್ನು ಸಂಗ್ರಹಿಸಲು ಮನೆ ಮನೆಗೆ ಪೊಲೀಸ್ ಯೋಜನೆಯಿಂದ ಸಹಾಯವಾಗಿದೆ.

ಯೋಜನೆಯಿಂದ ಸಾರ್ವಜನಿಕರೊಂದಿಗೆ ಪೊಲೀಸರು ಉತ್ತಮ ಹಾಗೂ ಸ್ನೇಹಪರ ಸಂಬಂಧವನ್ನು ಬೆಸೆದುಕೊಳ್ಳಲು ಅನುಕೂಲಕರ ವಾತಾವರಣ ನಿರ್ಮಾಣವಾಗುತ್ತದೆ. ಸ್ಥಳೀಯರಿಂದ ಸೂಕ್ಷ್ಮ ಮಾಹಿತಿಗಳನ್ನು ಪಡೆದುಕೊಳ್ಳಲು, ಅಪರಾಧಗಳನ್ನು ತಡೆ ಯಲು ಹಾಗೂ ಅಪರಾಧ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ಪತ್ತೆ ಮಾಡಲು ಸಾಧ್ಯವಾಗಿದೆ.

ಪೊಲೀಸ್ ವ್ಯವಸ್ಥೆಯಲ್ಲಿಸಾರ್ವಜನಿಕ ಸಹಭಾಗಿತ್ವ ಹೆಚ್ಚಾಗಿ, ಇಲಾಖೆ, ಸಾರ್ವಜನಿಕ ಸ್ನೇಹಿಯಾಗಿಸಿ ಸಮಾಜಕ್ಕೆ ಉತ್ತಮ ಸೇವೆಯನ್ನು ಒದಗಿಸಲು ಯೋಜನೆಯು ತನ್ನದೇ ಆದ ಕೊಡುಗೆ ನೀಡಿದೆ.

ಸಾರ್ವಜನಿಕರು ಮತ್ತು ಪೊಲೀಸರ ನಡುವೆ ಭ್ರಾತೃತ್ವ ಮತ್ತು ವಿಶ್ವಾಸವನ್ನು ಬೆಳೆಸಲು



ಯೋಜನೆ ಸಹಾಯಕವಾಗಲಿದೆ ಎಂದು ಅಂದಿನ ಗೃಹ ಸಚಿವರಾಗಿದ್ದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಒತ್ತಿ ಹೇಳಿದ್ದರು. ಜನರ ಮನೆ ಬಾಗಿಲಿಗೆ ಹೋಗಿ ಅವರ ಸಮಸ್ಯೆಗಳನ್ನು ಆಲಿಸೋಣ. ಅವರ ಸಮಸ್ಯೆಗಳನ್ನು ನಾವು ಪರಿಹರಿಸಿದಾಗ, ಅವರು ಇಲಾಖೆಯ ಬಗ್ಗೆ ಸಕಾರಾತ್ಮಕ ಅಭಿಪ್ರಾಯವನ್ನು ರೂಪಿಸಲು ಪ್ರಾರಂಭಿಸುತ್ತಾರೆ ಎನ್ನುವ ಅವರ ಆಶಯ ಬಹುತೇಕ ಸಾಕಾರ ಗೊಂಡಂತಾಗಿದೆ. ಸಮುದಾಯ ಕೇಂದ್ರಿತ ಪೊಲೀಸ್ ವ್ಯವಸ್ಥೆಯತ್ತ ಒಂದು ವ್ಯಾಪಕ ಬದಲಾವಣೆಯ ಭಾಗವಾಗಿದೆ. ಇದು ಕರ್ನಾಟಕದಾದ್ಯಂತ ನಾಗರಿಕರು ಮತ್ತು ಕಾನೂನು ಜಾರಿ ಸಂಸ್ಥೆಗಳ ನಡುವೆ ವಿಶ್ವಾಸವನ್ನು ಬಲಪಡಿಸಲು, ಸುರಕ್ಷತೆಯನ್ನು ಸುಧಾರಿಸಲು ಮತ್ತು ಸಹಕಾರವನ್ನು ಬೆಳೆಸಲು ಗುರಿ ಹೊಂದಿದೆ.

ಕರ್ನಾಟಕವು ಭಾರತದಲ್ಲಿ ಸಮುದಾಯ ಆಧಾರಿತ ಪೊಲೀಸ್ ವ್ಯವಸ್ಥೆಗೆ ಒಂದು ಮಾದರಿಯನ್ನು ಸ್ಥಾಪಿಸುತ್ತಿದೆ. 'ಮನೆ ಮನೆಗೆ ಪೊಲೀಸ್' ಯೋಜನೆಯ ಯಶಸ್ಸು ಸಮರ್ಪಿತ ಅನುಷ್ಠಾನ, ಸಮುದಾಯದ ಬೆಂಬಲ ಮತ್ತು ಸುರಕ್ಷಿತ ಮತ್ತು ಹೆಚ್ಚು ಸಂಪರ್ಕಿತ ಸಮಾಜವನ್ನು ನಿರ್ಮಿಸಲು ನಿರಂತರ ಮೌಲ್ಯಮಾಪನವನ್ನು ಅವಲಂಬಿಸಿರುತ್ತದೆ.

# ನವದೆಹಲಿಯಲ್ಲಿ 18ನೇ BRICS ಶೃಂಗಸಭೆ ಯಶಸ್ವಿ

ವಿಶ್ವದಲ್ಲಿ ಆರ್ಥಿಕವಾಗಿ ಭಾರಿ ವೇಗದಲ್ಲಿ ಬೆಳೆಯುತ್ತಿದ್ದ ಬ್ರೆಜಿಲ್, ರಷ್ಯಾ, ಭಾರತ ಮತ್ತು ಚೀನಾವನ್ನು ಒಟ್ಟಾಗಿ ಸೂಚಿಸಲು 'ಬ್ರಿಕ್' ಎಂಬ ಪದವನ್ನು 2001ರಲ್ಲಿ 'ಗೋಲ್ಡ್‌ಮನ್ ಸ್ಯಾಕ್ಸ್'ನ ಅರ್ಥಶಾಸ್ತ್ರಜ್ಞ ಜಿಮ್ ಓ'ನೀಲ್ ಅವರು ಬಳಸಿದರು. ಆಗ ಅದು ರಾಷ್ಟ್ರಗಳ ಒಕ್ಕೂಟವಾಗಿರಲಿಲ್ಲ. ಮುಂದಿನ ದಶಕಗಳಲ್ಲಿ ಈ ನಾಲ್ಕು ದೇಶಗಳು ಜಾಗತಿಕ ಆರ್ಥಿಕತೆಯಲ್ಲಿ ಪ್ರಮುಖ ಸ್ಥಾನ ಪಡೆಯಲಿವೆ ಎಂಬ ಆರ್ಥಿಕ ಅಂದಾಜಿನ ಭಾಗವಾಗಿ ಈ ಪದ ಬಳಕೆಗೆ ಬಂದಿತ್ತು. 2006ರಲ್ಲಿ ನಾಲ್ಕು ದೇಶಗಳ ವಿದೇಶಾಂಗ ಸಚಿವರು ಸಭೆ ಸೇರಿ, 'ಬ್ರಿಕ್' ರಾಷ್ಟ್ರಗಳ ನಡುವಿನ ಅಧಿಕೃತ ಸಹಕಾರಕ್ಕೆ ಚಾಲನೆ ನೀಡಿದರು. 2009ರ ಜೂನ್ 16ರಂದು ರಷ್ಯಾದ ಯೆಕತೆರಿನ್‌ಬರ್ಗ್‌ನಲ್ಲಿ ಮೊದಲ 'ಬ್ರಿಕ್' ಶೃಂಗಸಭೆ ನಡೆಯಿತು. 2011ರಲ್ಲಿ ದಕ್ಷಿಣ ಆಫ್ರಿಕಾ ಸೇರ್ಪಡೆಯಾದ ಬಳಿಕ 'ಬ್ರಿಕ್ಸ್' ಆಯಿತು. ಬ್ರಿಕ್ಸ್ ಒಂದು ಔಪಚಾರಿಕ ಅಂತರರಾಷ್ಟ್ರೀಯ ಆಯ್ದ ದೇಶಗಳ ಒಕ್ಕೂಟ ಇದು ಸಾಂಸ್ಥಿಕ ಸಂಸ್ಥೆಯಲ್ಲ. ಇದಕ್ಕೆ ಯಾವುದೇ ಪ್ರತ್ಯೇಕ ಒಪ್ಪಂದ, ಸ್ವಂತ ಬಜೆಟ್ ಅಥವಾ ಶಾಶ್ವತ ಕಾರ್ಯಾಲಯ ಇಲ್ಲ. ಪ್ರತಿ ವರ್ಷ ಒಬ್ಬ ಸದಸ್ಯ ರಾಷ್ಟ್ರ ಅಧ್ಯಕ್ಷತೆಯನ್ನು ವಹಿಸಿಕೊಳ್ಳುತ್ತದೆ. ಪ್ರಮುಖ ನಿರ್ಧಾರಗಳನ್ನು ಸಾಮಾನ್ಯವಾಗಿ ಎಲ್ಲ ಸದಸ್ಯ ರಾಷ್ಟ್ರಗಳ ಒಮ್ಮತದೊಂದಿಗೆ ತೆಗೆದುಕೊಳ್ಳಲಾಗುತ್ತದೆ. ಬ್ರಿಕ್ಸ್‌ನಲ್ಲಿ ರಾಜಕೀಯ, ಭದ್ರತೆ, ಆರ್ಥಿಕತೆ ಮತ್ತು ಹಣಕಾಸು ಸೇರಿದಂತೆ ಹಲವು ವಿಷಯಗಳ ಬಗ್ಗೆ ಕೊಡು–ಕೊಳ್ಳುವಿಕೆ ನಡೆಯುತ್ತದೆ. ಜನರ ನಡುವಿನ ಸಂಪರ್ಕ ಮತ್ತು ವಿನಿಮಯಕ್ಕೂ ಮಹತ್ವ ನೀಡಲಾಗುತ್ತದೆ. ವ್ಯಾಪಾರ, ಹೂಡಿಕೆ, ಆರೋಗ್ಯ, ಕೃಷಿ, ಶಿಕ್ಷಣ, ವಿಜ್ಞಾನ–ತಂತ್ರಜ್ಞಾನ, ಇಂಧನ, ಪರಿಸರ ಮತ್ತು ಡಿಜಿಟಲ್ ಆರ್ಥಿಕತೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸದಸ್ಯ ರಾಷ್ಟ್ರಗಳ ಸಚಿವರು, ಅಧಿಕಾರಿಗಳು ಮತ್ತು ತಜ್ಞರು ಸಭೆ ನಡೆಸಿ ಸಹಕಾರದ ಬಗ್ಗೆ ಚರ್ಚಿಸುತ್ತಾರೆ. ಒಂದು ಪರಿಕಲ್ಪನೆಯಿಂದ ಜಾಗತಿಕ ವೇದಿಕೆವರೆಗೆ ಬೆಳೆದುಬಂದು ಇಂದು 18ನೇ ಬ್ರಿಕ್ಸ್ ಶೃಂಗಸಭೆಯು ಭಾರತ ಅಧ್ಯಕ್ಷತೆಯಲ್ಲಿ ಸೆ.12 ಹಾಗೂ 13ರಂದು ನಡೆಯಿತು. ಬ್ರಿಕ್ಸ್ ಎನ್ನುವುದು ಇಂದು 11 ದೇಶಗಳನ್ನು ಒಳಗೊಂಡಿರುವ ಜಾಗತಿಕ ರಾಜಕೀಯ–ಆರ್ಥಿಕ ಸಹಕಾರದ ಪ್ರಮುಖ ವೇದಿಕೆ. ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಇಥಿಯೋಪಿಯಾ, ಇಂಡೋನೇಷ್ಯಾ, ಇರಾನ್, ಸೌದಿ ಅರೇಬಿಯಾ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಇದರ ಸದಸ್ಯ ರಾಷ್ಟ್ರಗಳು. ಈ ರಾಷ್ಟ್ರಗಳು ಒಟ್ಟಾಗಿ ವಿಶ್ವದ ಸುಮಾರು ಶೇ 49.5 ಜನಸಂಖ್ಯೆ, ಜಾಗತಿಕ ಜಿಡಿಪಿಯ ಸುಮಾರು ಶೇ 40 ಮತ್ತು ಜಾಗತಿಕ ವ್ಯಾಪಾರದ ಸುಮಾರು ಶೇ 26 ರಷ್ಟು ಪಾಲನ್ನು ಪ್ರತಿನಿಧಿಸುತ್ತವೆ.

ದಕ್ಷಿಣ ಆಫ್ರಿಕಾ ಸೇರ್ಪಡೆಯಾದ ಬಳಿಕ ಬ್ರಿಕ್ಸ್ ಒಂದು ದಶಕಕ್ಕೂ ಅಧಿಕ ಐದು ಸದಸ್ಯ ರಾಷ್ಟ್ರಗಳ ಒಕ್ಕೂಟ ವೇದಿಕೆಯಾಗಿಯೇ ಮುಂದುವರಿಯಿತು. 2023ರ ಜೊಹಾನೆಸ್‌ಬರ್ಗ್ ಶೃಂಗಸಭೆಯಲ್ಲಿ ವಿಸ್ತರಣೆಗೆ ಒಪ್ಪಿಗೆ ನೀಡಲಾಯಿತು. 2024ರಲ್ಲಿ ಈಜಿಪ್ಟ್, ಇಥಿಯೋಪಿಯಾ, ಇರಾನ್, ಸೌದಿ ಅರೇಬಿಯಾ ಮತ್ತು ಯುಎಇ ಬ್ರಿಕ್ಸ್‌ಗೆ ಸೇರಿದವು. ಇಂಡೋನೇಷ್ಯಾ 2025ರಲ್ಲಿ ಪೂರ್ಣ ಸದಸ್ಯವಾಯಿತು. ಇದರೊಂದಿಗೆ ಏಷ್ಯಾ, ಆಫ್ರಿಕಾ, ಪಶ್ಚಿಮ ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕದ ಪ್ರಮುಖ ರಾಷ್ಟ್ರಗಳು ಒಂದೇ ವೇದಿಕೆಯಲ್ಲಿ ಬಂದವು. ಇಂಧನ, ಜನಸಂಖ್ಯೆ, ವ್ಯಾಪಾರ ಮತ್ತು ಪ್ರಾದೇಶಿಕ ರಾಜಕೀಯದಲ್ಲೂ ಬ್ರಿಕ್ಸ್‌ನ ಪ್ರಭಾವ ಹೆಚ್ಚಿದೆ. ಸದಸ್ಯರ ಸಂಖ್ಯೆ ಹೆಚ್ಚಿದಂತೆ ಎಲ್ಲ ವಿಷಯಗಳಲ್ಲೂ ಒಮ್ಮತ ಸಾಧಿಸುವುದು ಸುಲಭವಲ್ಲ. ಭಾರತ–ಚೀನಾ ಸುಮಾರು ಎರಡು ದಶಕಗಳ ಪ್ರಯಾಣದಲ್ಲಿ ಬ್ರಿಕ್ಸ್ ನಾಲ್ಕು ಪ್ರಮುಖ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ. ವಿಭಿನ್ನ ರಾಜಕೀಯ ವ್ಯವಸ್ಥೆ ಮತ್ತು ವಿದೇಶಾಂಗ ನೀತಿಗಳ ನಡುವೆಯೂ ತನ್ನ ಸಹಕಾರವನ್ನು ಮುಂದುವರಿಸಿರುವುದು ಅದರ ಮೊದಲ ಸಾಧನೆ. ಹೊಸ ಅಭಿವೃದ್ಧಿ ಬ್ಯಾಂಕ್ ಸೇರಿದಂತೆ ವಿವಿಧ ಸಹಕಾರ ವ್ಯವಸ್ಥೆಗಳನ್ನು ರೂಪಿಸಿರುವುದು ಎರಡನೆಯದು. ಹಣಕಾಸು ಮತ್ತು ಜಾಗತಿಕ ಆಡಳಿತದ ಜೊತೆಗೆ ಆರೋಗ್ಯ, ಹವಾಮಾನ, ತಂತ್ರಜ್ಞಾನ, ಮುಂತಾದ ಹಲವಾರು ವಿಷಯಗಳಲ್ಲಿ ಒಡಂಬಡಿಕೆಗಳು ಮೂಡಿಬಂದವು. 2026ರ New Delhi Declaration ಒಟ್ಟು 140 ಅಂಶಗಳನ್ನು ಒಳಗೊಂಡಿದ್ದು, ರಾಜಕೀಯ–ಭದ್ರತೆ, ಆರ್ಥಿಕ–ಹಣಕಾಸು, ವಿಜ್ಞಾನ–ತಂತ್ರಜ್ಞಾನ, ಹವಾಮಾನ, ನಗರಾಭಿವೃದ್ಧಿ, ಆರೋಗ್ಯ, ಮಹಿಳಾ ಸಬಲೀಕರಣ ಮತ್ತು Global South ಸಹಕಾರದಂತಹ ವ್ಯಾಪಕ ಕ್ಷೇತ್ರಗಳನ್ನು ಒಳಗೊಂಡಿದ್ದು ಸೆಪ್ಟೆಂಬರ್ 12, 2026ರಂದು ನವದೆಹಲಿಯಲ್ಲಿ New Delhi Declaration ಅಂಗೀಕರಿಸಲಾಗಿದೆ. ಇದೇ ಶೃಂಗಸಭೆಯ ವಿಷಯ "Building for Resilience, Innovation, Cooperation and Sustainability" ಆಗಿತ್ತು. ಮುಂದಿನ ವರ್ಷ 2027ರಲ್ಲಿ BRICS ಅಧ್ಯಕ್ಷತೆಯನ್ನು ಚೀನಾ ವಹಿಸಿಕೊಳ್ಳಲಿದ್ದು, 19ನೇ BRICS ಶೃಂಗಸಭೆ ಚೀನಾದಲ್ಲಿ ನಡೆಯಲಿದೆ.




# ಹಿರಿಯ ನಟ ಅನಂತ್‌ನಾಗ್‌ಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ




ಅಹಮದಾಬಾದ್: ಕನ್ನಡ ಚಿತ್ರರಂಗದ ಹಿರಿಯ ನಟ ಅನಂತ್‌ನಾಗ್ ಅವರಿಗೆ ಭಾರತೀಯ ಚಿತ್ರರಂಗದ ಅತ್ಯುನ್ನತ ಗೌರವ ಎನಿಸಿರುವ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗುಜರಾತ್‌ನ ಕೆವಾಡಿಯಾದಲ್ಲಿ ಮಂಗಳವಾರ ನಡೆದ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಟ ಅನಂತ್‌ನಾಗ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಫಾಲ್ಕೆ ಪ್ರಶಸ್ತಿ ನೀಡಿ ಗೌರವಿಸಿದರು.

ಚಿತ್ರರಂಗದಲ್ಲಿ ಐದೂವರೆ ದಶಕಗಳ ಕಾಲ ಗಣನೀಯ ಸೇವೆ ಸಲ್ಲಿಸಿದ ಹಿನ್ನೆಲೆಯಲ್ಲಿ ಅನಂತ್ ನಾಗ್ ಅವರಿಗೆ ಫಾಲ್ಕೆ ಪ್ರಶಸ್ತಿ ಲಭಿಸಿದೆ.

1948ರ ಸೆ. 4ರಂದು ಅನಂತ್ ನಾಗ್ ಅವರು ಉತ್ತರ ಕನ್ನಡದ ಶಿರಳ್ಳಿ ಎಂಬಲ್ಲಿ ಜನಿಸಿದರು. 1973ರ 'ಸಂಕಲ್ಪ' ಚಿತ್ರದ ಮೂಲಕ ಬೆಳ್ಳಿ ತೆರೆಗೆ ಪಾದಾರ್ಪಣೆ ಮಾಡಿದ ಅನಂತ್ ನಾಗ್, ಆನಂತರದಲ್ಲಿ ಶ್ಯಾಮ್ ಬೆನಗಲ್ ಅವರ ಅಂಕುರ್, ಬಯಲುದಾರಿ, ನಾ ನಿನ್ನ ಬಿಡಲಾರೆ ಸೇರಿದಂತೆ ಹಲವಾರು ಚಿತ್ರಗಳಲ್ಲಿ ಅಭಿನಯಿಸಿದರು. ತಮ್ಮ ಆರಂಭಿಕ ಚಿತ್ರ ಜೀವನದಲ್ಲಿ ದೊಡ್ಡ ಯಶಸ್ಸು ಗಳಿಸಿದರು.

250ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿರುವ ಅನಂತ್ ನಾಗ್, ಯಾವುದೇ ಪಾತ್ರ ಕೊಟ್ಟರೂ ಲೀಲಾಜಾಲವಾಗಿ ಅಭಿನಯಿಸಬಲ್ಲ ಕಲಾವಿದ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಸುಮಂತ್ ಭಟ್ ಮಿಥ್ಯ ಚಿತ್ರಕ್ಕೆ ರಜತ ಕಮಲ ಪ್ರಶಸ್ತಿ ಸ್ವೀಕರಿಸಿದರು. ಇಂಬು ತುಳು ಸಿನಿಮಾ ತಂಡಕ್ಕೂ ಪ್ರಶಸ್ತಿ ಪ್ರದಾನ ಮಾಡಲಾಯಿತು. ತಮಿಳು ನಟ ಧನುಷ್ ಕ್ಯಾಪ್ಟನ್ ಮಿಲ್ಲರ್ ಸಿನೆಮಾ ಹಾಗೂ ರಾಯನ್ ಸಿನೆಮಾ ನಿರ್ದೇಶನಕ್ಕೆ ರಜತ ಕಮಲ ಸ್ವೀಕರಿಸಿದರು.

ಆರ್ಟಿಕಲ್ 370 ಸಿನಿಮಾಗೆ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ, ಯಾಮಿ ಗೌತಮ್ ಅವರಿಗೆ ಅತ್ಯುತ್ತಮ ನಟಿ ಹಾಗೂ ಬ್ರಹ್ಮಯುಗಂ ಚಿತ್ರದ ನಟನೆಗಾಗಿ ಮಮ್ಮುಟ್ಟಿ ಮತ್ತು ಚಂದು ಚಾಂಪಿಯನ್ ಚಿತ್ರದ ನಟನೆಗಾಗಿ ಕಾರ್ತಿಕ್ ಆರ್ಯನ್ ಅವರು ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಅಮರನ್ ಚಿತ್ರದ ನಿರ್ದೇಶಕ ರಾಜ್‌ಕುಮಾರ್ ಪೆರಿಯಸಾಮಿ ಅವರು ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಪಡೆದುಕೊಂಡಿದ್ದಾರೆ.

# ಕಬಡ್ಡಿಯಲ್ಲಿ ಭಾರತ ಮಹಿಳಾ ತಂಡಕ್ಕೆ ಸ್ವರ್ಣ ಮ್ಯಾರಾಥಾನ್, ಸ್ಕ್ವ್ಯಾಷ್‌ನಲ್ಲಿ ಬೆಳ್ಳಿ, ಕಂಚು



**ಐಚಿ–ನಗೋಯಾ:** 2026ರ ಏಷ್ಯನ್ ಗೇಮ್ಸ್ ನಲ್ಲಿ ಭಾರತ ಮಹಿಳಾ ಕಬಡ್ಡಿ ತಂಡವು ಇರಾನ್ ವಿರುದ್ಧ 37–34 ಅಂತರದಲ್ಲಿ ರೋಚಕ ಜಯ ಸಾಧಿಸಿ ಚಿನ್ನದ ಪದಕಕ್ಕೆ ಮುತ್ತಿಕ್ಕಿದೆ.

ಶನಿವಾರ ಟೊಕೈ ಸಿಟಿಜನ್ ಜಿಮ್ನಾಷಿಯಂನಲ್ಲಿ ನಡೆದ ಹೈವೋಲ್ಟೇಜ್ ಫೈನಲ್ ಪಂದ್ಯದಲ್ಲಿ ಭಾರತ ತಂಡವು ಅಂತಿಮ ಕ್ಷಣಗಳ ವರೆಗೂ ಉತ್ತಮ ಹೋರಾಟ ನಡೆಸಿ ಗೆಲುವು ದಾಖಲಿಸಿತು.

ಈ ಗೆಲುವಿನೊಂದಿಗೆ ಭಾರತ ಮಹಿಳಾ ಕಬಡ್ಡಿ ತಂಡವು ಟೂರ್ನಿಯಲ್ಲಿ ಅಜೇಯ ಓಟವನ್ನು ಕಾಯ್ದುಕೊಂಡಿತು. ಮಹಿಳಾ ಕಬಡ್ಡಿ ತಂಡದ ಗೆಲುವಿನೊಂದಿಗೆ ಹಾಲಿ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ಗೆದ್ದಿರುವ ಚಿನ್ನದ ಪದಕಗಳ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ. ಇದಕ್ಕೂ ಮೊದಲು ಮಹಿಳಾ ಕ್ರಿಕೆಟ್ ತಂಡ ಹಾಗೂ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಸುರುಚಿ ಸಿಂಗ್ ಮತ್ತು ಕಮಲ್ಜೀತ್ ಜೋಡಿ ಚಿನ್ನ ಗೆದ್ದಿತ್ತು.

ಭಾರತ ತಂಡವು 'ಎ' ಗುಂಪು ಹಂತದಲ್ಲಿ ಬಾಂಗ್ಲಾದೇಶ ಮತ್ತು ಜಪಾನ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿತ್ತು. ಗುಂಪು ಹಂತದಲ್ಲೇ ಇರಾನ್ ತಂಡವನ್ನೂ ಮಣಿಸಿದ್ದ ಭಾರತ, ಗುಂಪಿನಲ್ಲಿ ಅಗ್ರಸ್ಥಾನ ಪಡೆದುಕೊಂಡಿತ್ತು.

ಮಹಿಳಾ ಕಬಡ್ಡಿ ಸ್ಪರ್ಧೆ 2010ರ ಏಷ್ಯನ್ ಗೇಮ್ಸ್ ನಿಂದ ಕ್ರೀಡಾಕೂಟದ ಭಾಗವಾಗಿದೆ. ಈವರೆಗೆ ನಡೆದ ಆವೃತ್ತಿಗಳಲ್ಲಿ ಭಾರತ ಪ್ರತಿ ಬಾರಿಯೂ ಚಿನ್ನದ ಪದಕ ಗೆದ್ದಿತ್ತು. ಆದರೆ 2018ರ ಜಕಾರ್ತಾ ಏಷ್ಯನ್ ಗೇಮ್ಸ್ ನಲ್ಲಿ ಭಾರತ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟುಕೊಂಡಿದ್ದರೆ, ಇರಾನ್ ಚಿನ್ನ ಗೆದ್ದಿತ್ತು.

ಇದಕ್ಕೂ ಮೊದಲು ಸವನ್ ಬರ್ವಾಲ್ ಪುರುಷರ ಮ್ಯಾರಥಾನ್‌ನಲ್ಲಿ ಐತಿಹಾಸಿಕ ಬೆಳ್ಳಿ ಪದಕ ಗೆದ್ದರೆ, ಜೋಶ್ನಾ ಚಿನ್ನಪ್ಪ ಮತ್ತು ವೇಲವನ್ ಸೆಂಥಿಲ್‌ಕುಮಾರ್ ಜೋಡಿ ಸ್ಕ್ವ್ಯಾಷ್‌ನಲ್ಲಿ ಕಂಚಿನ ಪದಕ ಗೆದ್ದಿತ್ತು. ಮಿಶ್ರ ಡಬಲ್ಸ್ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಚಿನ್ನಪ್ಪ ಮತ್ತು ಸೆಂಥಿಲ್ ಸೋಲನುಭವಿಸಿದರು. 44 ವರ್ಷಗಳ ನಂತರ ಪುರುಷರ ಮ್ಯಾರಥಾನ್‌ನಲ್ಲಿ ಭಾರತದ ಪದಕ ಬರವನ್ನು ನೀಗಿಸುವಲ್ಲಿ ಬರ್ವಾಲ್ ಯಶಸ್ವಿಯಾದರು.

ಏಷ್ಯನ್ ಗೇಮ್ಸ್‌ನಲ್ಲಿ ಕಬಡ್ಡಿ ವಿಭಾಗದಲ್ಲಿ ಭಾರತ ಗೆದ್ದಿರುವ ಚಿನ್ನದ ಪದಕಗಳ ಸಂಖ್ಯೆ ಈಗ 12ಕ್ಕೆ ಏರಿಕೆಯಾಗಿದೆ. ಇದರಲ್ಲಿ ಪುರುಷರ ತಂಡವು 1990ರಿಂದ ಎಂಟು ಚಿನ್ನದ ಪದಕಗಳನ್ನು ಗೆದ್ದಿದೆ. ಇಂದು ಪುರುಷರ ಕಬಡ್ಡಿ ತಂಡವೂ ಚಿನ್ನದ ಪದಕಕ್ಕಾಗಿ ನಡೆಯಲಿರುವ ಫೈನಲ್‌ನಲ್ಲಿ ಇರಾನ್ ವಿರುದ್ಧ ಸೆಣಸಲಿದೆ. ಹೀಗಾಗಿ ಭಾರತ ಮತ್ತೊಂದು ಚಿನ್ನದ ನಿರೀಕ್ಷೆಯಲ್ಲಿದೆ.

ಸದ್ಯ ಭಾರತವು 3 ಚಿನ್ನ, 11 ಬೆಳ್ಳಿ ಮತ್ತು 13 ಕಂಚು ಸೇರಿ ಒಟ್ಟು 27 ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ 12ನೇ ಸ್ಥಾನದಲ್ಲಿತ್ತು.

**ಶೂಟಿಂಗ್‌ನಲ್ಲಿ ಮುಂದುವರಿದ ಪದಕ ಬೇಟೆ:** ಕರ್ನಾಟಕದ ತಿಲೋತ್ತಮ ಸೇನ್, ವಿದರ್ಸಾ ವಿನೋದ್ ಮತ್ತು ಆಶಿ ಚೌಕ್ಸಿ ಒಳಗೊಂಡ ಭಾರತ ತಂಡ ಶೂಟಿಂಗ್ ವಿಭಾಗದಲ್ಲಿ ಭಾರತಕ್ಕೆ 11ನೇ ಪದಕ ತಂದುಕೊಟ್ಟರು. ಈ ಮೂವರು 50 ಮೀ. ರೈಫಲ್ 3 ಪೊಸಿಷನ್ ತಂಡ ಸ್ಪರ್ಧೆಯಲ್ಲಿ 1763 ಅಂಕಗಳನ್ನು ಗಳಿಸಿ ದ್ವಿತೀಯ ಸ್ಥಾನ ಗಳಿಸಿದರು. ಆದರೆ ವೈಯಕ್ತಿಕ ವಿಭಾಗದಲ್ಲಿ ನಿರೀಕ್ಷಿತ ಪ್ರದರ್ಶನ ನೀಡಲು ಎಡವಿದರು.









Editor & Editorial Board, Publisher and Owned by Janaki Vijayakumar # 555, 17th Cross, SBM Colony, Srinivasanagar, Banashankari, Bengaluru-560050. Printed At : M/s Apoorva Printers & Publishers, 179, Suggata Road, H.M. Halli, Bengaluru-562157.